

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 06 Issue : 242 Monday 03-06-2024 E-mail : maruti.b.hosamani76@gmail.com Page: 4 Price : Rs. 1/-


## ನೂರು ಕೆಜಿ ರವಾ ಕಳ್ಳತನ ಮಾಡಲು ಪ್ರಯತ್ನ ಅಂಗನವಾಡಿ ಟೀಚರ್-ಆರೋಪ






**ಸಾತಿಹಾಳ :** ದೇವರ ಹಿಪ್ಪರಗಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಾತಿಹಾಳ ಗ್ರಾಮದ ಮೂರುನೇಯ ಅಂಗನವಾಡಿ ಕೇಂದ್ರದಲ್ಲಿ ಐವತ್ತು ಕೆಜಿ ರವಾ, ಐವತ್ತು ಕೆಜಿ ಹಿಟ್ಟನ್ನು ಕಳ್ಳತನ ಮಾಡಿದ ಅಂಗನವಾಡಿ ಕಾರ್ಯಕರ್ತೆ ಯಾದ ಮಹಾದೇವಿ ಶಿವಯ್ಯ ಮಠ ಇವರು ಸಾರ್ವಜನಿಕರ ಕೈಯಲ್ಲಿ ಸಿಕ್ಕಿ ಹಾಕಿ ಕೊಂಡಿದ್ದಾರೆ, ಸರ್ಕಾರ ಸಣ್ಣ ಮಕ್ಕಳ ಸಲುವಾಗಿ ಅಂಗನವಾಡಿ ಕೇಂದ್ರ ತೆರದಿದೇ ಆದ-ರೆ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕರು, ಮತ್ತು ಅಧಿಕಾರಿಗಳು ಶಾಮೀಲಾಗಿ ಈ ತರ ನಡೆಯುವುದು, ಅಂಗನವಾಡಿಯವರು ತಮ್ಮ ಮನೆಯಿಂದ ಮಕ್ಕಳಿಗೆ ಆಹಾರ ನೀಡುವ ತರ ಮಾಡುತ್ತಾರೆ, ಹಗಲು ಹೊತ್ತಿನಲ್ಲಿ ದರೋಡೆ ಮಾಡುವ ಸಮಯದಲ್ಲಿ ಗ್ರಾಮದ ಸಾರ್ವಜನಿಕರು ನೋಡಿ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸ್ಥಳಕ್ಕೆ ಕರೆಸಿ ಕೊಂಡು ಅವರನ್ನು ನಮ್ಮ ಊರಿನಿಂದ ವರ್ಗಾವಣೆ ಮಾಡಬೇಕು ಎಂದು ಮೇಲ್ಲಾಧಿಕಾರಿಗೆ ತಿಳಿಸಿದರು. ಹಾಗೂ ಈ ಸಮಯದಲ್ಲಿ ಗ್ರಾಮದ ಎಲ್ಲಾ ಸಾರ್ವಜನಿಕರು ಹಾಗೂ ಮಹಿಳೆಯರು, ಮಕ್ಕಳು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ. ಹಚ್ಯಾಳ ದೇವರ ಹಿಪ್ಪರಗಿ.**

## ಮತ ಎಣಿಕೆ: ಪ್ರತಿಬಂಧಕಾಜ್ಞೆ ವಿಧಿಸಿ ಜಿಲ್ಲಾಧಿಕಾರಿ ಆದೇಶ

**ಬಾಗಲಕೋಟೆ :** ಲೋಕಸಭಾ ಸಾರ್ವತ್ರಿಕ ಚುನಾವಣೆ ಅಂಗವಾಗಿ ಜೂನ್ 4 ರಂದು ಮತ ಎಣಿಕೆ ನಡೆಯಲಿದ್ದು, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮುಂಜಾಗ್ರತಾ ಕ್ರಮವಾಗಿ ಜಿಲ್ಲಾದ್ಯಂತ ಜೂನ್ 4ರ ಬೆಳಿಗ್ಗೆ 6 ಗಂಟೆಯಿಂದ ಅದೇ ದಿನ ಮಧ್ಯರಾತ್ರಿಯವರೆಗೆ 144 ರನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಆದೇಶ ಹೊರಡಿಸಿದ್ದಾರೆ.

ಮತ ಎಣಿಕೆ ಕೇಂದ್ರವಾದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಐದಕ್ಕಿಂತ ಹೆಚ್ಚಿನ ಜನರ ಗುಂಪು ಸೇರುವುದು, ಮೆರವಣಿಗೆ ಅಥವಾ ಸಭೆ ಸಮಾರಂಭ ಜರುಗಿಸುವುದನ್ನು ನಿಷೇಧಿಸಿದೆ. ಶಸ್ತ್ರ, ಬಡಿಗೆ, ಬರ್ಚಿ, ಖಡ್ಗ, ಗದೆ ಬಂದೂಕು, ಚೂರಿ ಲಾಠಿ, ಡೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನುಂಟು ಮಾಡುವ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹೋಗುವುದು ಹಾಗೂ ತಿರುಗಾಡುವುದನ್ನು ನಿಷೇಧಿಸಲಾಗಿದೆ. ಕಲ್ಲುಗಳನ್ನು ಮತ್ತು ಕ್ಷಾರಪದಾರ್ಥ ಇಲ್ಲವೇ ಸ್ಫೋಟಕ ವಸ್ತುಗಳು, ಯಾವುದೇ ದಾಹಕ ವಸ್ತುಗಳು ತೆಗೆದುಕೊಂಡು ಹೋಗುವುದು ಹಾಗೂ ಶೇಖರಿಸುವುದನ್ನು ನಿಷೇಧಿಸಲಾಗಿದೆ. ಕಲ್ಲುಗಳನ್ನು ಮತ್ತು ಎಸೆಯುವಂತಹ ವಸ್ತುಗಳನ್ನು ಎಸೆಯುವ ಅಥವಾ ಬಿಡುವ ಸಾಧನಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ. ಈ ಸ್ಥಳಗಳಲ್ಲಿ ಬಹಿರಂಗವಾಗಿ ಘೋಷಣೆ, ಪದ ಹಾಡುವುದು, ವಾದ್ಯಬಾರಿಸುವುದು, ವ್ಯಾಖ್ಯಾನಕೊಡುವುದು, ಸನ್ನೆ ಅಥವಾ ನಕಲ ಪ್ರದರ್ಶನವನ್ನು ಹಾಗೂ ಸಾರ್ವಜನಿಕ ಸಭ್ಯತೆ ಅಥವಾ ನೀತಿಯನ್ನು ಆಕ್ರಮಿಸಬಹುದಾದ ಕೃತ್ಯಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ. ಸಾರ್ವಜನಿಕವಾಗಿ ಯಾವುದೇ ವ್ಯಕ್ತಿ ಪ್ರಚೋದನಾತ್ಮಕ ಹಾಗೂ ಉದ್ರೇಕಕಾರಿ ಹಾಡುಗಳು, ಕೂಗಾಟ, ವ್ಯಕ್ತಿಗಳ ತೇಜೋವಧೆ ಮಾಡುವ ಚಿಹ್ನೆಗಳು, ಪ್ರತಿಕೃತಿಗಳು ಮುಂತಾದವುಗಳನ್ನು ಪ್ರದರ್ಶಿಸುವುದಾಗಲಿ ಹಾಗೂ ಸಾರ್ವಜನಿಕ ಗಾಂಭೀರ್ಯ ಹಾಗೂ ನೈತಿಕತೆಗೆ ಭಂಗ ತರುವಂತಹ ಕಾನೂನು ಮತ್ತು ಸುವ್ಯವಸ್ಥೆ ಭಂಗ ತರುವಂತಹ ಯಾವುದೇ ಕೃತ್ಯಗಳಲ್ಲಿ ತೊಡಗುವುದನ್ನು ನಿಷೇಧಿಸಲಾಗಿದೆ. ಯಾವುದೇ ವ್ಯಕ್ತಿ ಬಹಿರಂಗವಾಗಿ ಮೇಲೆ ವಿವರಿಸಿದ ಮಾರಕಾಸ್ತ್ರಗಳು, ಸ್ಫೋಟಕ ವಸ್ತುಗಳು, ವಿನಾಶಕಾರಿ ವಸ್ತುಗಳು ಹಾಗೂ ಇತರ ಆಕ್ಷೇಪಾರ್ಹ ವಸ್ತುಗಳನ್ನು ಹೊಂದಿದ್ದು ಕಂಡು ಬಂದಲ್ಲಿ ವಶಪಡಿಸಿಕೊಳ್ಳುವ ಅಧಿಕಾರಿ ಪೋಲಿಸ್ ಅಧಿಕಾರಿಗಳು ಹೊಂದಿದ್ದು, ಅಂತಹ ಮಾರಕಾಸ್ತ್ರಗಳನ್ನು ಸರಕಾರಕ್ಕೆ ಮುಟ್ಟುಗೋಲು ಮಾಡಿಕೊಂಡು, ಸಂಬಂಧಿಸಿದ ವ್ಯಕ್ತಿಗಳ ಮೇಲೆ ಕಾನೂನು ರಿತ್ಯ ಕ್ರಮ ಕೈಗೊಳ್ಳಲಾಗುವುದು.

### ಶಾಶ್ವತ ವಿಕಲಾಂಗತಾ ಫಲಾನುಭವಿಗೆ ಇಎಸ್ಐ ಪಿಂಚಣಿ ವಿತರಣೆ । ಇಎಸ್ಐ ಇಲಾಖೆಯ ಕಾರ್ಯ ಶ್ಲಾಘನೀಯ

## ನೌಕರರ ಕಾಳಜಿಗೆ ಸಂಘ ಮೊದಲಿನಿಂದಲೂ ಬೆನ್ನೆಲುಬಾಗಿ ನಿಂತಿದೆ: ಚರಂತಿಮಠ



**ಬಾಗಲಕೋಟೆ :** ನೌಕರರ ಕಾಳಜಿಗೆ ಬಿವಿವಿ ಸಂಘ ಮೊದಲಿನಿಂದಲೂ ಬೆನ್ನೆಲುಬಾಗಿ ನಿಂತಿದೆ, ದುರ್ಘಟನೆಯ ಹಾಗೂ ಅಪಘಾತದಂತಹ ಕಷ್ಟದ ಸಂದರ್ಭಗಳಲ್ಲಿ ಅವರಿಗೆ ಸಂಘದಿಂದ ಹಾಗೂ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಒದಗಿಸಿಕೊಡುವ ಕಾರ್ಯದಲ್ಲಿ ಸಂಘ ಮುಂಚೂಣಿಯಲ್ಲಿದೆ ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ವಿದ್ಯಾಗಿರಿಯಲ್ಲಿ ಬಸವೇಶ್ವರ ಇಂಟರನ್ಯಾಶನಲ್ ಪಬ್ಲಿಕ್ ಸ್ಕೂಲಿನ ಸಂಗೀತ ಶಿಕ್ಷಕ ಪ್ರಮೋದ ಹರಿಮಂದಿರ ಅವರಿಗೆ ಶಾಸ್ವತ ವಿಕಲಾಂಗತೆ ಫಲಾನುಭವವಾಗಿ ಮಾಸಿಕ ರೂ.7,000 ಪಿಂಚಣಿ ಚೆಕ್ ನೀಡಿ ಮಾತನಾಡಿದರು.

ಭಾರತ ಸರಕಾರದ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯದ ಇಎಸ್ಐಸಿ ನೌಕರರಿಗೆ ಸಾಮಾಜಿಕ ಸುರಕ್ಷೆತೆಯನ್ನು ಒದಗಿಸುವುದರಲ್ಲಿ ಮುಂಚೂಣಿಯಲ್ಲಿದ್ದು, ಇದು ಮಧ್ಯಮ ವರ್ಗದ ನೌಕರರ ಬಾಳಿನ ನಂದಾ ದೀಪವಾಗಿದೆ, ಹಾಗೆಯೇ ನೌಕರರ ಹಿತಾಸಕ್ತಿಗೆ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘವು ಯಾವಾಗಲೂ ಬೆನ್ನೆಲುಬಾಗಿ ನಿಲ್ಲುತ್ತಾ ಬಂದಿದೆ ಹಾಗೂ ಸರಕಾರಿ ಯೋಜನೆಗಳ ಅನುಷ್ಠಾನಕ್ಕೆ ಸಂಪೂರ್ಣ ಸಹಕಾರ ನೀಡಲಾಗುತ್ತದ್ದು, ನೌಕರರ ಬದುಕಿನ ಭದ್ರತಾ ಕಾಳಜಿಗೆ ಒತ್ತುನೀಡಲಾಗಿದೆ ಎಂದರು.

ಇಎಸ್ಐಸಿ ಬಾಗಲಕೋಟೆ ಶಾಖಾ ಪ್ರಭಂದಕರಾದ ಮಂಜುನಾಥ ಬಡಿಗೇರ ಮಾತನಾಡಿ ಬಾಗಲಕೊಟೆ ವಿದ್ಯಾಗಿರಿ ಬಸವೇಶ್ವರ ಇಂಟರನ್ಯಾಶನಲ್ ಪಬ್ಲಿಕ್ ಸ್ಕೂಲಿನ ಸಂಗೀತ ಶಿಕ್ಷಕ ಪ್ರಮೋದ ಹರಿಮಂದಿರ ಇವರಿಗೆ ಎರಡು ವರ್ಷಗಳ ಹಿಂದೆ ಶಾಲಾ ಅವಧಿಯಲ್ಲಿ ಶಾಲಾ ಆವರಣದಲ್ಲಿ ಕಾಲು ಜಾರಿ ಬಿದ್ದು ಕಾಲು ಮುರಿದಿತ್ತು, ಖಾಸಗಿ ಆಸ್ಪತ್ರೆಯಲ್ಲಿ ನಾಲ್ಕು ಬಾರಿ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿದ್ದರು, ಇದನ್ನು ಕಾರ್ಯಾವಧಿಯಲ್ಲಾದ ದುರ್ಘಟನೆ ಅಡಿಯಲ್ಲಿ ಪರಿಗಣಿಸಲ್ಪಟ್ಟು ಇಎಸ್ಐ ಇಲಾಖೆಯು ವೈದ್ಯಕೀಯ ವೆಚ್ಚ ರೂಪಾಯಿ 4,70,000 ಹಾಗೂ ವೈಧ್ಯರ ಸಲಹೆ ಮೇರೆಗೆ ಮನೆಯಲ್ಲಿ ಆರೈಕೆ ಅವಧಿ 442 ದಿನಗಳ ಸಂಬಳ ರೂ 2.75.000 ಇಎಸ್ಐ ಇಲಾಖೆಯಿಂದ ಸಂದಾಯವಾಗಿದೆ. ಇದೀಗ ಕಾರ್ಯಾವಧಿಯಲ್ಲಿನ ದುರ್ಘಟನೆಯೆಂದು ಪರಿಗಣಿಸಿದ ಇಎಸ್ಐ ಇಲಾಖೆಯು ಆರೈಕೆಯ ನಂತರವೂ ಕುಂಟುತ್ತ ನಡೆಯುತ್ತಿರುವುದುರಿಂದ ಇಎಸ್ಐ ವೈದ್ಯಕೀಯ ಮಂಡಳಿಯ ಶಿಫಾರಶಿನ ಮೇರೆಗೆ ಪ್ರಮೋದ ಹರಿಮಂದಿರ ಇವರಿಗೆ ಶಾಶ್ವತ ವಿಕಲಾಂಗತೆ ಫಲಾನುಭವವಾಗಿ ಮಾಸಿಕ ರೂ.7,000/- ಪಿಂಚಣಿ ನೀಡಲು ನಿರ್ಧರಿಸಿದೆ, ಪಿಂಚಣಿಯ ಮೊದಲ ಚೆಕ್ಕನ್ನು ಬಿ.ವಿ.ವಿ. ಸಂಘದ ಕಾರ್ಯಾಧ್ಯಕ್ಷರು ಹಾಗೂ ಮಾಜಿ ಶಾಸಕರರು ಆದ ಡಾ.ವೀರಣ್ಣ ಚರಂತಿಮಠ ಇವರು ಪ್ರಮೋದ ಹರಿಮಂದಿರಿಗೆ ವಿತರಿಸಿದರು ಎಂದರು.

ಕಾರ್ಯಕ್ರಮದಲ್ಲಿ, ಸಂಘದ ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಹಾಗೂ ನೌಕರರ ಕ್ಷೇಮಾಭಿವೃದ್ಧಿ ಅಧಿಕಾರಿಗಳಾದ ಎಚ್. ಎಚ್.ಯಾದವಾಡ ಹಾಗೂ ಹರಿಮಂದಿರ ಕುಟಂಬಸ್ಥರು ಉಪಸ್ಥಿತರಿದ್ದರು.

## ಶಿಕ್ಷಕರಿಗಾಗಿ ಬಿವಿವಿ ಸಂಘದಿಂದ "ಸ್ಮೈಲ್ ಟೀಚರ್" ಪುನಶ್ಚೇತನ ನಿರಂತರ ತರಬೇತಿ ಕಾರ್ಯಾಗಾರ





**ಬಾಗಲಕೋಟೆ :** ಮುಂದಿನ 5 ವರ್ಷದಲ್ಲಿ ಭಾರತ ಮತ್ತಷ್ಟು ಬದಲಾವಣೆಗೊಳ್ಳಲಿದೆ ಆ ನಿಟ್ಟಿನಲ್ಲಿ ಶಿಕ್ಷಕರಿಗಾಗಿ "ಸ್ಮೈಲ್ ಟೀಚರ" ಪುನಶ್ಚೇತನ ನಿರಂತರ ತರಬೇತಿ ಹಮ್ಮಿಕೊಂಡಿದ್ದು, ಇದು ಬಿವಿವಿ ಸಂಘದ ವಿನೂತನ ಕಾರ್ಯಗಾರವಾಗಿದೆ, ವಿದ್ಯಾರ್ಥಿಗಳ ಉಜ್ವಲ್ ಭವಿಷ್ಯದ ಯೋಜನೆಗಳನ್ನು ರೂಪಿಸಿಲಾಗಿದೆ ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ಸೋಮವಾರ ಬಿವಿವಿ ಸಂಘದ ಮಿನಿ ಸಭಾಭವನದಲ್ಲಿ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ, ಬಾಗಲಕೋಟೆ ಹಾಗೂ ವಿಸ್ತಾರ ಜಿಂದಗಿ ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ "ಸ್ಮೈಲ್ ಟೀಚರ್" ಪುನಶ್ಚೇತನ ನಿರಂತರ ತರಬೇತಿಯ ಪ್ರಾಥಮಿಕ ಅಂತದ ಎರಡು ದಿನ ನಡೆದ ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡಿದರು.

ಬದಲಾವಣೆಗಾಗಿ ಶಿಕ್ಷಕರಿಗೆ ತರಬೇತಿ ಅತಿಮುಖ್ಯವಾಗಿದ್ದು, ದಿನ ನಿತ್ಯ ಅಧ್ಯಯನ ಜೋತಗೆ ಮಕ್ಕಳಿಗೆ ಪಾಠ ಮಾಡುವದರಿಂದ ಮಕ್ಕಳಿಗೆ ಅನುಕೂಲ ಜೊತೆಗೆ ಶಿಕ್ಷಕರಿಗೆ ಜ್ಞಾನ ವೃದ್ಧಿ ಆಗುತ್ತದೆ, ಶಿಕ್ಷಕರು ಪರಿಶುದ್ಧವಾಗಿ ಜೀವನ ನಡೆಸುವುದರ ಜೊತೆಗೆ ತಮ್ಮಲ್ಲಿ ಅದ್ಭುತ ಜ್ಞಾನದಿಂದ ಕೆಲಸಮಾಡಬೇಕು, ತಮ್ಮೊಳಗೆ ತಾವು ಸಂಶೋಧನಾತ್ಮಕ ವಿಷಯಗಳಿಂದ ಜ್ಞಾನದ ಪುನರಾವರ್ತೆಯನ್ನು ಮಾಡಿಕೊಳ್ಳಬೇಕು, ಎಐ ತಂತ್ರಜ್ಞಾನ ಈ ಕಾಲಘಟ್ಟದಲ್ಲಿ ಮುಂದಿನ 5 ವರ್ಷ ಭಾರತ ಮತ್ತಷ್ಟು ಬದಲಾವಣೆಗೊಳ್ಳಲಿದ್ದು ಆ ನೀಟ್ಟಿನಲ್ಲಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಶಿಕ್ಷಕರಿಗೆ ನೀಡುವ ಈ ತರಬೇತಿ ಕಾರ್ಯಾಗಾರ ಅನಕೂಲಕರವಾಗಲಿದೆ ಎಂದರು.

ವಿಸ್ತಾರ ಜಿಂದಗಿ ಸಂಸ್ಥಾಪಕರಾದ ಮಹೇಶ ಮಾಶ್ಯಾಳ ಮಾತನಾಡಿ ಶಿಕ್ಷಕರ ನೀರಂತರ ಅಧ್ಯಯನ ಕ್ರಿಯಾಶೀಲತೆಗಾಗಿ 9 ತಿಂಗಳ ಆನ್‌ಲೈನ್ ಮತ್ತು ಆಫ್ ಲೈನ ಕಾರ್ಯಾಗಾರ, ಅನೇಕ ವಿಷಗಳ ಮಂಡನೆಗಳು ಸ್ಪರ್ದೆಗಳಿರುತ್ತವೆ, ಉತ್ತಮ ಶಿಕ್ಷಕರಿಗೆ ಸರ್ಟಿಪಿಕೇಟ್ ಕೋಡಲಾಗುವುದು, ಶಿಕ್ಷಕರು ಪ್ರತಿದಿನ 15 ನಿಮಿಷ ಅಧ್ಯಯನದಲ್ಲಿ ತೊಡಗಬೇಕು, ಒಂದು ವರ್ಷದೊಳಗೆ ಬದಲಾವಣೆ ಕಾಣಬೇಕು, ಶಿಕ್ಷಕರ ಮುಖದಲ್ಲಿ ನಗು ಖಂಡರೆ ಮಗುವಿನ ನನಸ್ಸು ಅರಳುತ್ತದೆ. ಶಿಕ್ಷಣ ರಂಗದಲ್ಲಿ ಶಿಕ್ಷಕರು ಆಧುನಿಕತೆಯ ತಕ್ಕಹಾಗೆ ಬದಲಾವಣೆಗೊಂಡು ನೀರಂತರ ಸಂಶೋಧನಾ ಅಧ್ಯಯನದಿಂದ ಗಟ್ಟಿಯಾದ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕಾಗಿದೆ, ಶಿಕ್ಷಕರಿಗಾಗಿ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಮುಂದಿನ 30-40 ವರ್ಷಗಳ ಮುಂದಿನ ಪಿಳಿಗೆಯನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಕರಿಗಾಗಿ ಇಂಥ ಕಾರ್ಯಾಗಾರವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಪದನಿಮಿತ್ಯ ಕಾರ್ಯದರ್ಶಿಗಳಾದ ಪ್ರಾಚಾರ್ಯ ಕೆ.ಎಚ್.ಹೊಸುರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಾಗಾರದಲ್ಲಿ ಪ್ರಾಥಮಿಕ ಹಾಗೂ ಪ್ರೌಡಶಾಲೆಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಮಹಾಂತೇಶ ಶೆಟ್ಟರ ಇದ್ದರು, ಡಾ.ಮಾಧವ ಭಟ್, ಡಾ.ಪಂಪಾಪತಿ,ಡಾ.ಗುರುರಾಜ ಪಾಟೀಲ, ಸುರೇಶ ಕುಲಕರ್ಣಿ, ಡಾ.ದೀಪಾ ಗರಗ ಅವರು ಸಂಪನ್ಮೂಲವ್ಯಕ್ತಿಗಳಾಗಿ ಭಾಗವಹಿಸಿದ್ದರು.

ಎರಡು ದಿನಗಳ ಕಾಲ ನಡೆದ ಕಾರ್ಯಾಗಾರದಲ್ಲಿ 400 ಕ್ಕೂ ಹೆಚ್ಚು ಪ್ರಾಥಮಿಕದಿಂದ ಪದವಿಪೂರ್ವದ ಶಿಕ್ಷಕರು ಭಾಗವಹಿಸಿದ್ದರು.

## ಇಂದು ನಡೆಯುವ ವಿಧಾನ ಪರಿಷತ್ ಚುನಾವಣೆಯಲ್ಲಿ ಇವರು ಗೆಲ್ಲಲೇಬೇಕು ಎಂದು ನಿರ್ಧಾರ ಆಗಿದೆ




**ಮೊಳಕಾಲ್ಮುರು :** ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಗೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಡಿ.ಟಿ ಶ್ರೀನಿವಾಸ್ ಅವರ ಗೆಲುವು ನಿಶ್ಚಿತವಾಗಿದೆ. ಶಿಕ್ಷಕರ ನಡುವೆ ನಿರಂತರ ಒಡನಾಟ ಇಟ್ಟುಕೊಂಡು ಅವರ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರಗಳೇನು ಎಂಬುದನ್ನು ಅರಿತಿರುವ ಡಿ.ಟಿ ಶ್ರೀನಿವಾಸ್ ಅವರನ್ನು ಬೆಂಬಲಿಸಿ ಮತ ನೀಡಿ.

ಕೈಜೋಡಿಸಿ_ಜೀವನಬದಲಿಸಿ ಶ್ರೀ ಎನ್ ವೈ ಗೋಪಾಲಕೃಷ್ಣ

ಜನಪ್ರಿಯ ಶಾಸಕರು ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರ ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ತಿಪ್ಪೇಸ್ವಾಮಿ. ಹೊಂಬಾಳೆ ಮೊಳಕಾಲ್ಮುರು.**

## ರಾಮದುರ್ಗ: ಪೇಜಾವರ ವಿಶ್ವಪ್ರಸನ್ನ ತೀರ್ಥರ ಪುರಪ್ರವೇಶ: ಅದ್ದೂರಿ ಸ್ವಾಗತ



**ರಾಮದುರ್ಗ :** ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರು ಸೋಮವಾರ ರಾಮದುರ್ಗ ಪಟ್ಟಣಕ್ಕೆ ಆಗಮಿಸಿದಾಗ ಬ್ರಾಹ್ಮಣ ಸಮಾಜದ ಪ್ರಮುಖರು ಅದ್ದೂರಿ ಸ್ವಾಗತ ಕೋರಿದರು.

ಸಾರೋಟನಲ್ಲಿ ಆಸೀನರಾಗಿದ್ದ ಪೇಜಾವರ ಶ್ರೀಗಳನ್ನು ಮತ್ತು ವಿಶ್ವೇಶ ತೀರ್ಥರ ಭಾವಚಿತ್ರವನ್ನು ತೆರದ ಜೀಪಿನಲ್ಲಿ ಇಟ್ಟು ಭವ್ಯ ಮೆರವಣಿಗೆಯಲ್ಲಿ ಕರೆ ತರಲಾಯಿತು. ಮೆರವಣಿಗೆಯು ಇಲ್ಲಿನ ವೆಂಕಟೇಶ್ವರ ದೇವಸ್ಥಾನದಿಂದ ತೇರ ಬಜಾರ, ರಾಘವೇಂದ್ರ ರಥ ಬೀದಿಗಳಲ್ಲಿ ಸಂಚರಿಸಿತು. ಮೆರವಣಿಗೆಯಲ್ಲಿ ಸುಮಂಗಲೆಯರು ಪೂರ್ಣಕುಂಭ ಮೇಳೆ, ಡೊಳ್ಳು, ಜಾಂಜ್ ಪದಕಗಳ ಸದ್ದು ಮೊಳಗಿದವು. ಮಹಿಳೆಯರು ಆರತಿ ಹಿಡಿದು ಸಾಗಿದರು. ಭಕ್ತರು ಮತ್ತು ಮಕ್ಕಳು ಸಾಂಪ್ರದಾಯಿಕ ಉಡುಪು ತೊಟ್ಟು ಮೆರವಣಿಗೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಮತ್ತು 48 ದಿನಗಳ ಕಾಲ ಮಂಡಲ ಪೂಜೆ ನೆರವೇರಿಸಿದ ಪೇಜಾವರ ಶ್ರೀಗಳನ್ನು ಬ್ರಾಹ್ಮಣ ಸಮಾಜ ಮತ್ತು ಹಿಂದೂ ಸಂಘಟನೆಗಳ ಪದಾಧಿಕಾರಿಗಳು ಇಲ್ಲಿನ ರಾಘವೇಂದ್ರ ಮಠದಲ್ಲಿ ಅಭಿನಂದಿಸಲಾಯಿತು. ಮೇ 28 ರಂದು ರಾಘವೇಂದ್ರ ಮಠದಲ್ಲಿ ಶ್ರೀಗಳ ಪಾದಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

### ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಧೂಳಕೇಡ: ವೃತ್ತಿಪರ ಕೋರ್ಸ್‌ಗೆ ಅರ್ಜಿ ಆಹ್ವಾನ

**ವಿಜಯಪುರ :** 2024-25ನೇ ಸಾಲಿನಲ್ಲಿ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆ ಧೂಳಖೇಡನಲ್ಲಿ ಇಲೆಕ್ಟ್ರಿಷಿಯನ್, ಫಿಟ್ಟರ್, ವೃತ್ತಿಗಳಿಗೆ ಮೆರಿಟ್ ಕಮ್ ರಿಜರ್ವೇಶನ್ ಆಧಾರಿತ ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

1,200 ರೂ ವಾರ್ಷಿಕ ಶುಲ್ಕವಿದ್ದು, ಜುನ್ 6ರ ವರೆಗೆ ಇಲಾಖೆ ವೆಬ್‌ಸೈಟ್ www.cite.karnataka.gov.in ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 9008451727, 9901477667, 8123290323, 9481528220 ಗಳಿಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆ ಧೂಳಖೇಡದ ಪ್ರಾಚಾರ್ಯರಾದ ಎ.ಕೆ. ಚವ್ಹಾಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ: ವಿವಿಧ ವೃತ್ತಿಪರ ಕೋರ್ಸ್‌ಗೆ ಅರ್ಜಿ ಆಹ್ವಾನ

**ವಿಜಯಪುರ :** ವಿಜಯಪುರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ (NCVT) ಸಂಯೋಜನೆ ಹೊಂದಿದ 12 ವಿವಿಧ ವೃತ್ತಿಗಳಲ್ಲಿ ಪ್ರವೇಶಗಳು ಪ್ರಾರಂಭವಾಗಿವೆ.

ಸಂಸ್ಥೆಯು ಸುಸಜ್ಜಿತ ಕಾರ್ಯಾಗಾರವನ್ನು ಹೊಂದಿದ್ದು, ಆಧುನಿಕ industry 4.0 ಅಡಿಯಲ್ಲಿ Tata Technologies Ltd, ಇವರ ಸಹಯೋಗದೊಂದಿಗೆ ಉತ್ತಮ ದರ್ಜೆ ತರಬೇತಿ ನೀಡಲಾಗುವುದು, ಹಾಗೂ ತರಬೇತಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಉದ್ಯೋಗ ಭರವಸೆ ನೀಡಲಾಗುವುದು. ಪ್ರವೇಶಕ್ಕೆ ವಾರ್ಷಿಕವಾಗಿ 1,200 ರೂ ಶುಲ್ಕವನ್ನು ಪಡೆದುಕೊಳ್ಳಲಾಗುವುದು.

ಎಸ್‌ಎಸ್‌ಎಲ್‌ಸಿ ಹಾಗೂ 8ನೇ ತರಗತಿ ಪಾಸಾದ ಅಭ್ಯರ್ಥಿಗಳು ಪ್ರವೇಶ ಹೊಂದಲು ಅರ್ಹರಿದ್ದು, www.cite.karnataka.gov.in ಇಲಾಖೆ ಜಾಲತಾಣದ ಮೂಲಕ ಮೇ 20 ರಿಂದ ಜೂನ್ 3ರವರೆಗೆ ಆನ್ ಲೈನ್ ಅರ್ಜಿ ಸಲ್ಲಿಸಬಹುದು ಒಟ್ಟು 470 ಸ್ಥಾನಗಳಿಗೆ ಪ್ರವೇಶ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 9972682184, 9448986381, 9886437517 ಮತ್ತು 08352260360 ಗೆ ಸಂಪರ್ಕಿಸಿಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ: ಪಿಆರ್‌ಓ ಮತ್ತು ಎಪಿಆರ್‌ಓಗಳಿಗೆ 2ನೇ ಹಂತದ ತರಬೇತಿ

## ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರದೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ: ಡಿಸಿ ನಲಿನ್ ಅತುಲ್



**ಕೊಪ್ಪಳ :** ಚುನಾವಣಾ ಮತದಾನ ದಿನದಂದು ನಿಯೋಜಿತ ಸಿಬ್ಬಂದಿ ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಿ ಜವಾಬ್ದಾರಿಯಿಂದ ಹಾಗೂ ಚುನಾವಣಾ ಆಯೋಗದ ಮಾರ್ಗಸೂಚಿಯನುಸಾರ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಚುನಾವಣಾ ನಿಯೋಜಿತ ಸಿಬ್ಬಂದಿಗಳಿಗೆ ಸೂಚಿಸಿದರು.

ಸೋಮವಾರದಂದು ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ-2024ರ ಸಂಬಂಧ ಜಿಲ್ಲೆಯ ಎಲ್ಲಾ ಪಿ.ಆರ್.ಓ ಹಾಗೂ ಎ.ಪಿ.ಆರ್.ಓ ಗಳಿಗೆ ಆಯೋಜಿಸಿದ್ದ 2ನೇ ಹಂತದ ತರಬೇತಿ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪಿ.ಆರ್.ಓ ಮತ್ತು ಎ.ಪಿ.ಆರ್.ಓ ಗಳು ಮತದಾನದ ದಿನದಂದು ನಿಗದಿತ ಸಮಯಕ್ಕೆ ನಿಯೋಜಿತ ಮತಗಟ್ಟೆಗೆ ಹಾಜರಾಗಬೇಕು. ಯಾವುದೇ ರೀತಿಯ ನಿರ್ಲಕ್ಷ್ಯತನ ತೋರದೆ ಚುನಾವಣಾ ಆಯೋಗ ನೀಡಿದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಒತ್ತಡಮುಕ್ತವಾಗಿ ಹಾಗೂ ಶಾಂತಿ ಯುತವಾಗಿ ಮತದಾನ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ಚುನಾವಣಾ ಸಿಬ್ಬಂದಿಗೆ ತಿಳಿಸಿದರು.

ಜಿಲ್ಲಾ ಮಟ್ಟದ ಮಾಸ್ಟರ್ ಟ್ರೈನರ್ ವಿದ್ಯಾಧರ ಮೇಘರಾಜ ಅವರು ಮಾತನಾಡಿ, ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆಯು ಜೂನ್ 3ರಂದು ನಡೆಯಲಿದೆ. ಜಿಲ್ಲೆಯಲ್ಲಿ ಒಟ್ಟು 24 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಎಲ್ಲಾ ಮತಗಟ್ಟೆಗಳ ಪಿ.ಆರ್.ಓ ಮತ್ತು ಎ.ಪಿ.ಆರ್.ಓ ಗಳು ಹೇಗೆ ಕಾರ್ಯ ನಿರ್ವಹಿಸಬೇಕು ಎಂದು ತರಬೇತಿ ನೀಡಿದರು. ಮತಗಟ್ಟೆ ಅಧಿಕಾರಿಗಳು ಮುಕ್ತ, ನ್ಯಾಯಸಮ್ಮತ, ಶಾಂತಿಯುತ ಮತದಾನ ನಡೆಸಲು ಯಾವ ರೀತಿ ಕರ್ತವ್ಯ ನಿರ್ವಹಿಸಬೇಕು ಎಂಬುವುದರ ಬಗ್ಗೆ ಮಾಹಿತಿ ನೀಡಿದರು.

ಮಸ್ಟರಿಂಗ್ ಕಾರ್ಯಗಳಲ್ಲಿ ತಿಳಿಸಿದ ಸಮಯ ಮತ್ತು ಸ್ಥಳದಲ್ಲಿ ಸೇರಬೇಕು. ಮತಪೆಟ್ಟಿಗೆಗಳು, ಮತಪತ್ರಗಳನ್ನು ಪಡೆದುಕೊಳ್ಳಬೇಕು ಎಂದು ತಿಳಿಸುತ್ತಾ ಇನ್ನಿತರ ಮತದಾನಕ್ಕೆ ಬೇಕಾಗುವಂತ ಸಾಮಗ್ರಿಗಳ ಬಗ್ಗೆ ಪಿ.ಆರ್.ಓ ಮತ್ತು ಎ.ಪಿ.ಆರ್.ಓ ಗಳಿಗೆ ಮಾಹಿತಿ ನೀಡಿದರು. ಮತಗಟ್ಟೆ ತಲುಪಿದ ನಂತರ ನಿರ್ವಹಿಸಬೇಕಾದ ಕಾರ್ಯದ ಬಗ್ಗೆ ತಿಳಿಸಿದರು. ಏಜೆಂಟ್ ಅಥವಾ ಪ್ರತಿನಿಧಿಗಳ ನೇಮಕ ಪ್ರಕ್ರಿಯೆ ಬಗ್ಗೆ ತಿಳಿಸಿದರು. ಮತಗಟ್ಟೆ ವ್ಯವಸ್ಥೆ, ಮತಪತ್ರ ನಿರ್ವಹಣೆ ಹಾಗೂ ಗ್ರೀನ್ ಪೇಪರ್ ಸೀಲ್ ಅಳವಡಿಕೆ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ತಹಶೀಲ್ದಾರರಾದ ವಿಠ್ಠಲ್ ಚೌಗಲಾ, ಜಿಲ್ಲಾ ತರಬೇತಿ ಸಂಸ್ಥೆ ಪ್ರಾಂಶುಪಾಲರಾದ ಕೃಷ್ಣಮೂರ್ತಿ ದೇಸಾಯಿ, ಚುನಾವಣಾ ತಹಶೀಲ್ದಾರ ರವಿ ವಸ್ತ್ರದ್ ಸೇರಿದಂತೆ ಜಿಲ್ಲೆಯ ಎಲ್ಲಾ ಪಿ.ಆರ್.ಓ., ಎ.ಪಿ.ಆರ್.ಓ ಗಳು ಉಪಸ್ಥಿತರಿದ್ದರು.

# ಬೆಳಗಾವಿ: 'ಕಾಹೇರ್' 14ನೇ ಘಟಿಕೋತ್ಸವ: 1,739 ಪದವಿ ಪ್ರದಾನ ಮಾಡಿದ ಉಪರಾಷ್ಟ್ರಪತಿ




**ಬೆಳಗಾವಿ :** ನಗರದಲ್ಲಿ ಸೋಮವಾರ ನಡೆದ ಕೆಎಲ್‌ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ಕಾಹೇರ್) 14ನೇ ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ ಅವರು ಘಟಿಕೋತ್ಸವ ಭಾಷಣ ಮಾಡಿದರು. ಒಟ್ಟು 1,739 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ಕಾಹೇರ್‌ನಿಂದ ಇದೇ ಮೊದಲ ಬಾರಿಗೆ ನೀಡಲಾದ 'ಗೌರವ ಡಾಕ್ಟರೇಟ್' ಅನ್ನು ಅಮೆರಿಕದ ಫಿಲಿಡೆಲ್ಫಿಯಾದ ಥಾಮಸ್ ಝೆಫರ್ಸನ್ ವಿಶ್ವವಿದ್ಯಾಲಯದ ವೈಸ್ ಪ್ರೊವೊಸ್ಟ್ ಡಾ.ರಿಚರ್ಡ್ ಜಾಕೋಬ್ ಡರ್ಮನ್ ಅವರಿಗೆ ಪ್ರದಾನ ಮಾಡಿದರು. ಆರೋಗ್ಯ ವಿಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆ ಪರಿಗಣಿಸಿ ಈ ಪದವಿ ನೀಡಲಾಯಿತು. ಡರ್ಮನ್ ಅವರು ಪದವಿಯನ್ನು ತಮ್ಮ ಸಹ ಸಂಶೋಧಕರಾಗಿದ್ದ ಡಾ.ಬಿ.ಎಸ್. ಕೊಡಕಣಿ ಅವರಿಗೆ ಸಮರ್ಪಿಸಿದರು.

45 ಚಿನ್ನದ ಪದಕಗಳು, 30 ಪಿಎಚ್‌ಡಿಗಳು, 13 ಸ್ನಾತಕೋತ್ತರ (ಡಿ.ಎಂ/ ಎಂ.ಸಿಎಚ್), 644 ಸ್ನಾತಕೋತ್ತರ ಪದವಿ, 1,023 ಪದವಿ, 9 ಸ್ನಾತಕೋತ್ತರ ಡಿಪ್ಲೊಮಾ, 4 ಡಿಪ್ಲೊಮಾ, 5 ಫೆಲೋಶಿಪ್ ಮತ್ತು 11 ಪ್ರಮಾಣಪತ್ರ ಕೋರ್ಸ್‌ಗಳನ್ನೂ ಉಪರಾಷ್ಟ್ರಪತಿ ಪ್ರದಾನ ಮಾಡಿದರು.

ಕಾಹೇರ್‌ನ ಕುಲಾಧಿಪತಿ ಪ್ರಭಾಕರ ಕೋರೆ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಜಗದೀಪ್ ಧನಕರ ಪತ್ನಿ ಸುದೇಶ, ಕುಲಪತಿ ಡಾ.ನಿತಿನ್ ಗಂಗಾನೆ, ಪರೀಕ್ಷಾ ನಿಯಂತ್ರಕಿ ಡಾ.ಚಂದ್ರಾ ಮೆಟಗುಡ್ಡ ವೇದಿಕೆಯಲ್ಲಿದ್ದರು.

# ದದೇಗಲ್ ಬಿಎಡ್ ಕಾಲೇಜಿನಲ್ಲಿ ಯುವ ಸ್ಪಂದನ ಕಾರ್ಯಕ್ರಮ




**ಕೊಪ್ಪಳ :** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ ಮತ್ತು ಜನ ಆರೋಗ್ಯ ಕೇಂದ್ರ, ಎಪಿಡಿಮೀಯಾಲಜಿ ವಿಭಾಗ, ನಿಮ್ಹಾನ್ಸ್, ಬೆಂಗಳೂರುರವರ ಸಂಯುಕ್ತಾಶ್ರಯದಲ್ಲಿ ಮೇ 22 ರಂದು ರಾಜೀವ್ ಗಾಂಧಿ ರೂರಲ್ ಕಾಲೇಜ್ ಆಫ್ ಎಜ್ಯುಕೇಷನ್ (ಬಿ.ಎಡ್) ದದೇಗಲ್ ಕಾಲೇಜಿನಲ್ಲಿ ಯುವ ಸ್ಪಂದನಾ ಕೇಂದ್ರ ಕೊಪ್ಪಳರವರಿಂದ ವಿದ್ಯಾರ್ಥಿಗಳಿಗೆ ಜೀವನ ಕೌಶಲ್ಯ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನ ಸಹಾಯಕ ಪ್ರಾಧ್ಯಾಪಕರಾದ ತಿಮ್ಮನಾಯಕ ಕೆ.ಬಿ ಮತ್ತು ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನಿಮ್ಹಾನ್ಸ್‌ನ ಕ್ಷೇತ್ರ ಸಂಪರ್ಕಾಧಿಕಾರಿ ನಾಗರತ್ನ ಅವರು ಮಾತನಾಡಿ ಜೀವನ ನಡೆಸಲು ಅಗತ್ಯವಾದ ವಿಶ್ವ ಸಂಸ್ಥೆ ಸೂಚಿಸಿದಂತಹ ಹತ್ತು ಜೀವನ ಕೌಶಲ್ಯಗಳ ವಿಷಯಗಳನ್ನು ಅಳವಡಿಸಿಕೊಳ್ಳಲು ಎಲ್ಲಾ ವಿದ್ಯಾರ್ಥಿಗಳು ಸಲಹೆ ಸೂಚನೆಗಳನ್ನು ನೀಡಿದರು.

ಯುವ ಪರಿವರ್ತಕರಾದ ಅಜ್ಮೀರ ದೊಡ್ಡಮನಿರವರು ಯುವಕರಿಗೆ ಯುವ ಸ್ಪಂದನಾ ಯೋಜನೆಯಡಿ ಬರುವ ಅರಿವು ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ಕಾಲೇಜಿನ ಪ್ರಾಂಶುಪಾಲರಾದ ವಿನೋದ ಹೂಲಿ ಹಾಗೂ ಯುವ ಸಮಾಲೋಚಕರಾದ ಸುಜಾತಾ ಚಂದರಗಿ ಹಾಗೂ ಕಾಲೇಜಿನ ಇತರೆ ಸಿಬ್ಬಂದಿ ವರ್ಗ ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಬಿ.ಎಂ.ಹೊರಕೇರಿ ಸಂಸ್ಕರಣ ಗ್ರಂಥಕ್ಕೆ ಬರಹ ಲೇಖನ ಕವನ ಆಹ್ವಾನ

**ಬಾದಾಮಿ :** ಮಾಜಿ ಶಾಸಕ ದಿಂ. ಬಿ.ಎಂ. ಹೊರಕೇರಿ ಅವರ ಸಂಸ್ಮರಣ ಗ್ರಂಥವನ್ನು ಹೊರತರಲಾಗುತ್ತಿದ್ದು, ಗ್ರಂಥಕ್ಕೆ ಹೊರಕೇರಿಯವರ ಕುರಿತು ಬರಹ, ಲೇಖನ, ಕವಿತೆಗಳನ್ನು ಆಹ್ವಾನಿಸಲಾಗಿದೆ.

ರೈತರ ಪಾಲಿನ ಸಂಜೀವಿನಿಯಂತೆ ಕಾರ್ಯಗೈದ ಧೀಮಂತ ರಾಜಕಾರಣಿ ಬಿ.ಎಂ.ಹೊರಕೇರಿ ಅವರ ಮೂರ್ತಿಯನ್ನು ತಾಲೂಕಿನ ಬೇಲೂರ-ಆಲಿಹಾಳ ಕ್ರಾಸ್‌ನಲ್ಲಿ ಅನಾವರಣಗೊಳ್ಳುವ ನಿಮಿತ್ಯ ಅವರ ಮಹಾದಾಯಿ ಹುಟ್ಟಿನ ಮಾಸದ ನೆನಪು ಸದಾ ಹಸಿರಾಗಿ ಉಳಿಯುವ ಸದುದ್ದೇಶದಿಂದ ಗ್ರಂಥ ಶಾಸ್ತ್ರೀಯ ನೆಲೆಯಲ್ಲಿ, ಹೊರಕೇರಿಯವರ ವ್ಯಕ್ತಿತ್ವಕ್ಕೆ ಮೆರಗು ತರುವ ನೆಲೆಯಲ್ಲಿ ಪ್ರಧಾನ ಸಂಪಾದಕ ಡಾ.ವಿ.ಬಿ.ಸಣ್ಣಸಕ್ಕರಗೌಡರ (9901510259) ಹಾಗೂ ಸಂಪಾದಕರಾಗಿ ಆರ್.ವಿ.ಗೌಡಪ್ಪಗೌಡ್ರ (ಮೊ: 9844909089) ಅವರುಗಳು "ಹೊನ್ನಬಿತ್ಯಾರ ಹೊರಕೇರಿ" ಎಂಬ ಬಿ.ಎಂ.ಹೊರಕೇರಿ ಇವರ ಸಂಸ್ಮರಣ ಗ್ರಂಥದ ಬೆಲೆಯುಳ್ಳ ಕಾರ್ಯ ನಿರ್ವಹಿಸಲಿದ್ದಾರೆ.

ಆಸಕ್ತರು ಬಿ.ಎಂ.ಹೊರಕೇರಿ ಅವರನ್ನು ಕುರಿತು ಶುಭನುಡಿ, ಲೇಖನ, ಅನಿಸಿಕೆಗಳು, ಅವರ ಜೀವನಕ್ಕೆ ಸಂಬಂಧಿಸಿದ ಬರಹಗಳನ್ನು ಮತ್ತು ಕವನಗಳನ್ನು ರಚಿಸಿ ಸಂಪಾದಕರುಗಳ ಇ-ಮೇಲ್ (rvgoudappagoudr@gmail.com) ಅಥವಾ (venkanagouda259@gmail.com) ಇಲ್ಲಿಗೆ ಕಳುಹಿಸಬೇಕು ಎಂದು ಶ್ರೀ ಬಿ.ಎಂ.ಹೊರಕೇರಿ ಅವರ ಸಂಸ್ಕರಣ ಗ್ರಂಥ ಸಮಿತಿಯ ಅಧ್ಯಕ್ಷ ಪಿ.ಆರ್.ಗೌಡರ ಹಾಗೂ ಪ್ರಧಾನ ಕಾರ್ಯದರ್ಶಿ ಎಂ.ಡಿ.ಯಲಿಗಾರ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇವಾಲಯ, ಬಸದಿ, ಮಸೀದಿ ಮೇಲೆ ಹೆಲಿಕಾಪ್ಟರನಿಂದ ಪುಷ್ಪಾರ್ಚನೆ



**ರಬಕವಿ-ಬನಹಟ್ಟಿ :** ತಾಲೂಕಿನ ಬನಹಟ್ಟಿ, ರಬಕವಿ, ಮಹಾಲಿಂಗಪೂರ, ತೇರದಾಳ ಪಟ್ಟಣ ಸೇರಿದಂತೆ ಅನೇಕ ಗ್ರಾಮಗಳ ಇಪ್ಪತ್ತಕ್ಕೂ ಅಧಿಕ ದೇವಾಲಯ, ಬಸದಿ ಹಾಗು ಮಸೀದಿಗಳ ಮೇಲೆ ಬುಧವಾರ ಇಡೀ ದಿನ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು.

ಉದ್ಯಮಿ ಪ್ರಕಾಶ ದೇಸಾಯಿಯವರಿಂದ ಬನಹಟ್ಟಿಯ ಐ.ಬಿ. ಹತ್ತಿರ ಹೆಲಿಪ್ಯಾಡ್ ನಿರ್ಮಿಸಿ, ಸುಮಾರು ಇಪ್ಪತ್ತು ಸುತ್ತುಗಳ ಪ್ರತ್ಯೇಕ ಕ್ಷೇತ್ರ ಪ್ರದರ್ಶನದಲ್ಲಿ ನೂರಕ್ಕೂ ಅಧಿಕ ಜನರು ಪರ್ಯಟನೆ ಮಾಡಿದ್ದು ವಿಶೇಷ.

ಶರಣಬಸವ ಶಿವಾಚಾರ್ಯರು ಮಾತನಾಡಿ, ಈ ಭಾಗದ ಜನತೆಗೆ ತಮ್ಮ ಸ್ವಂತ ಊರುಗಳನ್ನು ಬಾನಂಗಳದ ಎತ್ತರದಿಂದ ನೋಡುವ ಮೂಲಕ ದೇವಾಲಯಗಳ ಮೇಲೆ ಪುಷ್ಪಾರ್ಚನೆ ಮಾಡುವಲ್ಲಿ ಇದೇ ಮೊದಲ ಬಾರಿಯಾಗಿದ್ದು, ನಿಜಕ್ಕೂ ಶ್ಲಾಘನೀಯ ಕಾರ್ಯವೆಂದರು.

ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಮಾತನಾಡಿ, ಜಾತಿ, ಮತ, ಪಂಥ ಎಲ್ಲೆಮೀರಿ ಸರ್ವ-ಧರ್ಮೀಯರನ್ನು ಪ್ರೀತಿಸುವ ಮೂಲಕ ನೂರಾರು ಜನರಿಂದ ಆಕಾಶದಿಂದ ಪುಷ್ಪಾರ್ಚನೆಗೆ ಕಾರಣೀಭೂತರಾದ ಪ್ರಕಾಶ ದೇಸಾಯಿಯವರ ಕಾರ್ಯ ಮಾದರಿಯಾಗಿದೆ ಎಂದರು.

# ಮಧ್ವಮಹಾಮಂಡಲ ಅಧ್ಯಕ್ಷರಾಗಿ ಎಸ್.ಬಿ. ಸತ್ಯನಾರಾಯಣ



**ಬಾಗಲಕೋಟೆ :** ನವನಗರದ ಶ್ರೀಕೃಷ್ಣಮಠ ಆವರಣದಲ್ಲಿರುವ ಅಖಿಲ ಭಾರತ ಮಾಧ್ವ ಮಹಾಮಂಡಲ ವಿದ್ಯಾರ್ಥಿ ನಿಲಯದ 2024-27ನೇ ಸಾಲಿಗೆ ಪದಾಧಿಕಾರಿಗಳನ್ನು ಘೋಷಿಸಲಾಗಿದೆ.

ಗೌರವಾಧ್ಯಕ್ಷರಾಗಿ ಬ್ರಾಹ್ಮಣ ಸಮಾಜದ ಹಿರಿಯರಾದ ಸಿ.ಎನ್.ದಾಸ, ಅಧ್ಯಕ್ಷರಾಗಿ ಎಸ್.ಬಿ.ಸತ್ಯನಾರಾಯಣ, ಉಪಾಧ್ಯಕ್ಷರಾಗಿ ಬಾಲಕೃಷ್ಣ ಮಾರ್ಕೋಡ, ನರಸಿಂಹ ಆಲೂರ, ಡಾ.ಗಿರೀಶ ಮಸೂರಕರ ಅವರನ್ನು ಆಯ್ಕೆ ಮಾಡಲಾಗಿದೆ.

ಕಾರ್ಯದರ್ಶಿಯಾಗಿ ಡಾ. ಕೆ. ರಾಘವೇಂದ್ರರಾವ್, ಸಹ ಕಾರ್ಯದರ್ಶಿಯಾಗಿ ಪ್ರದೀಪ ಪರ್ವತಿಕರ, ಕೋಶಾಧ್ಯಕ್ಷರಾಗಿ ಗಿರೀಶ ಉಡುಪಿ, ಕಾರ್ಯಕಾರಿಣಿ ಸದಸ್ಯರಾಗಿ ಗೋಪಾಲ ಜಂಬಗಿ, ಲಕ್ಷ್ಮೀನಾರಾಯಣ ತಂತ್ರಿ, ಕೆ.ವೆಂಕಟೇಶರಾವ್, ಪ್ರಸಾದ ಕಾರಂತ, ವಿನಾಯಕ ತಾಳಿಕೋಟಿ, ಭಾಸ್ಕರ ಮನಗೂಳಿ, ಕೃಷ್ಣಾ ಅಥಣಿ ಅವರನ್ನು ಆಯ್ಕೆ ಮಾಡಲಾಗಿದೆ.

ಮಹಾಮಂಡಲದ ಕೇಂದ್ರ ಘಟಕದ ಅಧ್ಯಕ್ಷ ಎಚ್.ವಿ.ಗೌತಮ, ಪ್ರಧಾನ ಕಾರ್ಯದರ್ಶಿ ಶ್ರೀಪಾದ ಸಿಂಗನಮಲ್ಲಿ, ಕೋಶಾಧ್ಯಕ್ಷ ವಿ.ಕೆ.ಹರಿದಾಸ ಅವರುಗಳು ಶಾಶ್ವತ ಆಹ್ವಾನಿತರಾಗಿರಲಿದ್ದಾರೆ. ಮಹಾಮಂಡಲದ ಕೇಂದ್ರ ಘಟಕದ ಕಾರ್ಯದರ್ಶಿ ಎನ್.ಎಸ್.ದ್ವಾರಕನಾಥ ಅವರು ಈ ಆಯ್ಕೆಗಳನ್ನು ಘೋಷಿಸಿದ್ದಾರೆ.

# ವ್ಯವಹಾರದಲ್ಲಿ ಪ್ರಾಮಾಣಿಕತೆಯಿರಲಿ: ಗುರುಸಿದ್ಧೇಶ್ವರ ಶ್ರೀ



**ರಬಕವಿ :** ವ್ಯವಹಾರ ಯಾವುದೇ ಇರಲಿ, ನಾವು ಮಾಡುವ ಕಾರ್ಯದಲ್ಲಿ ಪ್ರಾಮಾಣಿಕತೆ ಇರಬೇಕೆಂದು ರಬಕವಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಹೇಳಿದರು.

ರಬಕವಿಯಲ್ಲಿ ನಡೆದ ಹಿರೋ ಹೋಂಡಾ ಶೋರೂಂ ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಕೇವಲ ಲಾಭದ ದೃಷ್ಟಿಕೋನ ಒಂದೇ ಆಗದೆ ಜನರ ಪ್ರೀತಿಗೆ ಪಾತ್ರರಾಗಬೇಕೆಂದರು.

ಬನಹಟ್ಟಿಯ ಹಿರೇಮಠದ ಶರಣಬಸವ ಶಿವಾಚಾರ್ಯರು ಮಾತನಾಡಿ, ವ್ಯವಹಾರ ಸ್ನೇಹಮಯವಾಗಿ ಬೆಳೆಯಬೇಕು. ಅದರಲ್ಲಿ ಗ್ರಾಹಕ ಮತ್ತು ಮಾಲಿಕ ಇಬ್ಬರೂ ತೃಪ್ತಿಪಟ್ಟು ಕೊಳ್ಳುವಂತಾಗುವದಕ್ಕೆ ವ್ಯವಹಾರ ಎನ್ನುತ್ತಾರೆಂದರು. ಇಂಚಗೇರಿಯ ರುದ್ರಮನಿ ಸ್ವಾಮೀಜಿ ಮಾತನಾಡಿದರು.

ಶೋರೂಂಮ್ ಮಾಲಿಕ ಗುರು ಹೊರಟ್ಟಿ, ಎ.ಬಿ. ದೇಸಾಯಿ, ಮಲ್ಲು ಭದ್ರನ್ನವರ, ರಾಜು ಕಡಕಬಾವಿ, ಪವನ ಲಡ್ಡಾ, ಸೋಮಶೇಖರ ಕೊಟ್ರಶೆಟ್ಟಿ, ಚಿದಾನಂದ ಹೊರಟ್ಟಿ, ಬಸವರಾಜ ದಲಾಲ, ರೇವಣ್ಣ ಉಮದಿ,

ಸುವರ್ಣಾ ಹೊರಟ್ಟಿ, ಗೀತಾ ಮಿರ್ಜಿ, ಗಿರಿಜಾ ಅಂದಾನಿ, ಆರುಷಿ, ಮಂಜುಳಾ ಕೆಂಧೂಳಿ, ಪ್ರಜ್ವಲ್, ಶಶಾಂಕ, ಚಂದ್ರಶೇಖರ, ಮನೋಜ ಆಳಂದಕರ, ಕಿರಣ, ಮಹಾದೇವಪ್ಪ ಹೊರಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಚಿಣ್ಣರ ಸ್ವಾಗತಕ್ಕೆ ರಬಕವಿ-ಬನಹಟ್ಟಿ ತಾಲೂಕು ಸಜ್ಜು

## ರಬಕವಿ-ಬನಹಟ್ಟಿ ತಾಲೂಕಿನಲ್ಲಿ ಶಾಲಾ ಪ್ರಾರಂಭೋತ್ಸವಕ್ಕೆ ಸಕಲ ಸಿದ್ಧತೆ

● ಕಿರಣ ಶ್ರೀಶೈಲ ಆಳಗಿ

---





**ರಬಕವಿ-ಬನಹಟ್ಟಿ :** ಮೇ 29 ರಂದು ಶಾಲೆಗಳು ಪ್ರಾರಂಭವಾಗಿದ್ದು , ಮೇ 31 ರಂದು ಶಾಲಾ ಪ್ರಾರಂಭೋತ್ಸವ ನಿಮಿತ್ಯ ಚಿಣ್ಣರನ್ನು ಶಾಲೆಗೆ ಸ್ವಾಗತಿಸಲು ಸಕಲ ಸಿದ್ಧತೆಗಳನ್ನು ಶಿಕ್ಷಣ ಇಲಾಖೆ ಕೈಗೊಳ್ಳುತ್ತಿದೆ. ಮೇ 29 ಹಾಗೂ 30 ರಂದು ಶಿಕ್ಷಕರು ಶಾಲೆಗಳಿಗೆ ಹಾಜರಾಗಿ ಪೂರ್ವ ತಯಾರಿಯಲ್ಲಿ ತೊಡಗಿದ್ದಾರೆ. ಶಾಲಾ ಆವರಣ, ಕೊಠಡಿ, ಅಡುಗೆ ಕೋಣೆ, ಅಡುಗೆ ಪಾತ್ರೆಗಳು, ಆಹಾರ ಧಾನ್ಯಗಳು, ನೀರಿನ ಟ್ಯಾಂಕ್ ಇತ್ಯಾದಿಗಳನ್ನು ಸ್ವಚ್ಛಗೊಳಿಸುವ ಮತ್ತು ಅಚ್ಚುಕಟ್ಟಾಗಿ ಜೋಡಿಸಿ ಇಡುವ ಕಾರ್ಯ ನಡೆಯಲಿದ್ದು, ಶಿಕ್ಷಕರು ತರಗತಿ ಶಾಲಾ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಸಿದ್ಧಪಡಿಸಿಕೊಂಡು ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಲಿದ್ದಾರೆ.

**ಮೇ 31 ಪ್ರಾರಂಭೋತ್ಸವ :**

ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಿ ಶಾಲಾ ವಾತಾವರಣವನ್ನು ಆಕರ್ಷಕಗೊಳಿಸಿ ಅತ್ಯಂತ ಉತ್ಸಾಹದಿಂದ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಪೋಷಕರು ಸೇರಿ ಶಾಲಾ ಮಕ್ಕಳನ್ನು ಸ್ವಾಗತಿಸಲಿದ್ದಾರೆ. ಮಧ್ಯಾಹ್ನದ ಬಿಸಿ ಊಟವನ್ನು ಸಿಹಿ ಊಟದೊಂದಿಗೆ ಆರಂಭಿಸಿ ಶಾಲೆಯನ್ನು ಕಲಿಕಾ ಕೇಂದ್ರ ಮಾಡಲು ಶಿಕ್ಷಣ ಇಲಾಖೆ ಸಜ್ಜಾಗಿದೆ.

**ಗುಣಾತ್ಮಕ ಶೈಕ್ಷಣಿಕ ವರ್ಷ :**

ಪ್ರಸ್ತುತ ಶೈಕ್ಷಣಿಕ ವರ್ಷವನ್ನು ಗುಣಾತ್ಮಕ ಶೈಕ್ಷಣಿಕ ವರ್ಷ ಎಂದು ಆಚರಿಸಲಾಗುತ್ತಿದ್ದು ಪರಿಣಾಮಕಾರಿಯಾದ ಮತ್ತು ರಚನಾತ್ಮಕ ಚಟುವಟಿಕೆಗಳನ್ನು ಶಾಲೆಗಳು ಸಂಘಟಿಸಲು ಸೂಚನೆಗಳನ್ನು ನೀಡಲಾಗಿದೆ. ಶಿಕ್ಷಕರು ನಿತ್ಯದ ಚಟುವಟಿಕೆಗಳು, ವಾರದ ವಿಶೇಷಗಳು, ಮಾಸಿಕ ಕಾರ್ಯಕ್ರಮಗಳು ಇವುಗಳನ್ನು ಒಳಗೊಂಡ ಸಮಗ್ರ ಯೋಜನೆಯನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತರಾಗಲಿದ್ದಾರೆ.

**ಮಿಂಚಿನ ಸಂಚಾರ :**

ಶಾಲಾ ಸಿದ್ಧತೆ, ಸ್ವಚ್ಛತೆ, ಶಿಕ್ಷಕರ ತಯಾರಿ ಹಾಗೂ ಮಕ್ಕಳ ಹಾಜರಾತಿ ಕುರಿತು ಪರಿಶೀಲಿಸಲು ಶಿಕ್ಷಣ ಇಲಾಖೆಯ ವಿವಿಧ ಅಧಿಕಾರಿಗಳ ತಂಡಗಳನ್ನು ರಚಿಸಿದ್ದು ಮಿಂಚಿನ ಸಂಚಾರ ಕೈಗೊಳ್ಳಲಿವೆ.

**ಸೇತುಬಂಧ ಕಾರ್ಯಕ್ರಮ :**

ಸೇತುಬಂಧ ಶಿಕ್ಷಣ ವಾಗಲಿದ್ದು ಒಂದರಿಂದ ಮೂರನೇ ತರಗತಿಗಳಿಗೆ 30 ದಿನಗಳು ಹಾಗೂ ನಾಲ್ಕರಿಂದ 10 ನೇ ತರಗತಿಗಳಿಗೆ 15 ದಿನಗಳು ಸೇತುಬಂಧ ಶಿಕ್ಷಣವನ್ನು ನಿರ್ವಹಿಸಲಾಗುತ್ತದೆ. ಈ ಅವಧಿಯಲ್ಲಿ ಮಕ್ಕಳ ಕಲಿಕಾ ನ್ಯೂನ್ಯತೆಗಳನ್ನು ಗುರುತಿಸಿ ಪರಿಹಾರ ಬೋಧನೆ ಮಾಡುವ ಮೂಲಕ ಮಕ್ಕಳನ್ನು ಮುಂದಿನ ಕಲಿಕೆಗೆ ಅಣಿ ಮಾಡಲಾಗುತ್ತದೆ.

**ಶಾಲಾ ದಾಖಲಾತಿ ಆಂದೋಲನ :**

ಶಾಲೆಗೆ ದಾಖಲಾಗದಿರುವ ಅರ್ಹ ವಯಸ್ಸಿನ ಮಕ್ಕಳು ಹಾಗೂ ಶಾಲೆಯನ್ನು ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಲು ದಾಖಲಾತಿ ಆಂದೋಲನ ಕೈಗೊಳ್ಳಲಾಗುತ್ತದೆ. 2024 ರ ಜೂನ್ ಒಂದಕ್ಕೆ ನಾಲ್ಕು ವರ್ಷ ತುಂಬಿದ ಎಲ್ಲ ಮಕ್ಕಳು ಎಲ್ಕೆಜಿ ತರಗತಿಗೆ ದಾಖಲಾಗಲು ಅರ್ಹರಾಗಿರುತ್ತಾರೆಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

**ಪಠ್ಯ ಪುಸ್ತಕಗಳ ಪೂರೈಕೆ :**

ಈಗಾಗಲೇ ಬಹುತೇಕ ಪಠ್ಯ ಪುಸ್ತಕಗಳನ್ನು ಎಲ್ಲಾ ಶಾಲೆಗಳಿಗೆ ತಲುಪಿಸಲಾಗಿದ್ದು ಶಾಲಾ ಪ್ರಾರಂಭೋತ್ಸವದ ದಿನದಂದು ಮಕ್ಕಳ ಕೈ ಸೇರಲಿವೆ.

**ಅತಿಥಿ ಶಿಕ್ಷಕರ ನೇಮಕ :**

ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುವ ಮೂಲಕ ಕಲಿಕಾ ಬೋಧನಾ ಪ್ರಕ್ರಿಯೆಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತಿದೆ ಎಂದು ಶಿಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

**ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸಿ ಹಬ್ಬದ ವಾತಾವರಣ ನಿರ್ಮಿಸಿ ಮಕ್ಕಳನ್ನು ಸಿಹಿಯೊಂದಿಗೆ ಸ್ವಾಗತಿಸಲು ನಮ್ಮ ಶಾಲೆಗಳು ಸನ್ನದ್ಧವಾಗಿವೆ. ಶಿಥಿಲಗೊಂಡ ಕೊಠಡಿಗಳಲ್ಲಿ ಮಕ್ಕಳನ್ನು ಕೂಡ್ರಿಸದಂತೆ ಎಚ್ಚರಿಕೆ ನೀಡಲಾಗಿದ್ದು, ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಎಲ್ಲ ಕ್ರಮ ವಹಿಸಲು ಮುಖ್ಯ ಶಿಕ್ಷಕರಿಗೆ ತಿಳಿಸಲಾಗಿದೆ.**

**। ಅಶೋಕ್ ಬಸಣ್ಣವರ**
**ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಮಖಂಡಿ**

**2024-25 ನೇ ಶೈಕ್ಷಣಿಕ ವರ್ಷ ಮಕ್ಕಳ ಕಲಿಕೆಯಲ್ಲಿ ಗರಿಷ್ಠ ಕಲಿಕೆಯ ಮೈಲುಗಲ್ಲಾಗಲಿ ಎಂಬ ಆಶಯವಿದ್ದು, ಶೈಕ್ಷಣಿಕ ವರ್ಷದ ಆರಂಭಕ್ಕೆ ಅಗತ್ಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.**

**। ಶ್ರೀಶೈಲ ಬುರ್ಲಿ**
**ಶಿಕ್ಷಣ ಸಂಯೋಜಕರು, ಜಮಖಂಡಿ**

# ಬಸವಣ್ಣನವರು ಸಮಾಜ ಸುಧಾರಕರಾಗಿದ್ದರು



**ಚನ್ನಮ್ಮನ ಕಿತ್ತೂರು :** ವಿಶ್ವಗುರು ಬಸವಣ್ಣನವರ ಜೀವನದ ಆದರ್ಶಗಳನ್ನು ಇಂದಿನ ಯುವಪೀಳಿಗೆ ಜೀವನದಲ್ಲಿ ಅಳವಡಿಸಿಕೊಂಡರೆ ಅವರ ಭವಿಷ್ಯ ಬಂಗಾರವಾಗುವುದೆಂದು ಬೈಲೂರಿನ ಸರಕಾರಿ ಪ್ರೌಢ ಶಾಲೆ ಶಿಕ್ಷಕ ಮಂಜುನಾಥ ಕಳಸಣ್ಣವರ ಹೇಳಿದರು.

ಕಲ್ಮಠದ ಶ್ರೀ ಶಂಕರ ಚಂದರಗಿ ಸಭಾ ಭವನದಲ್ಲಿ ರಾಜಗುರು ಸಂಸ್ಥಾನ ಕಲ್ಮಠ ಮತ್ತು ಕಿತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವುಗಳ ಸಂಯುಕ್ತ ಆಶ್ರಯದಲ್ಲಿ ಮಾಸಿಕ ಶಿವಾನುಭವ ಮತ್ತು ಸುವರ್ಣ ಕರ್ನಾಟಕ ಸಂಭ್ರಮ ಅಂಗವಾಗಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ವಿಶ್ವಗುರು ಬಸವ ಜಯಂತಿ ಕುರಿತು ಉಪನ್ಯಾಸ ನೀಡಿದ ಅವರು, ವಚನ ಕ್ರಾಂತಿಯ ಹರಿಕಾರರಾಗಿದ್ದ ಬಸವಣ್ಣನವರು ಕೇವಲ ಒಬ್ಬ ದಾರ್ಶನಿಕ ವ್ಯಕ್ತಿಯಾಗಿರದೆ ಸಮಾಜ ಸುಧಾರಕ, ರಾಜಕೀಯ ಮುತ್ಸದ್ದಿ, ಧರ್ಮ ಸಂಸ್ಥಾಪಕ, ಶಿಕ್ಷಣ ತಜ್ಞರಾಗಿ ಮಾಡಿದ ಕಾರ್ಯಗಳು ಮತ್ತು ಕಾಯಕ ಕುರಿತು ಅವರು ನೀಡಿದ ವಿಚಾರಗಳು ಅನುಪಮವಾಗಿವೆ ಎಂದು ತಿಳಿಸಿದರು.

ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರಾಚಾರ್ಯ ಡಾ.ಜಿ.ಕೆ.ಭೂಮನಗೌಡರ ಬಸವಣ್ಣನವರು ಸಮಾಜಕ್ಕೆ ನೀಡಿದ ಕೊಡುಗೆಗಳು ಇಂದಿಗೂ ಅಜರಾಮರವಾಗಿ ಉಳಿದಿವೆ ಎಂದು ಬಸವಣ್ಣವರನ್ನು ಸ್ಮರಿಸಿದರು

ಸಾನಿಧ್ಯ ವಹಿಸಿ ಆರ್ಶೀವಚನ ನೀಡಿ ಮಾತನಾಡಿದ ರಾಜಗುರು ಸಂಸ್ಥಾನ ಕಲ್ಮಠದ ಶ್ರೀ ಮಡಿವಾಳ ರಾಜಯೋಗೀಂದ್ರ ಸ್ವಾಮಿಜೀ 12ನೇ ಶತಮಾನದಲ್ಲಿ ಸ್ತ್ರೀ ಶೋಷಣೆ, ಜಾತೀಯತೆ, ಮೂಢ ನಂಬಿಕೆಗಳು, ವಿರುದ್ಧ ಹೋರಾಡಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿದ ಮಹಾನ್ ಮಾನವತಾವಾದಿ ಬಸವಣ್ಣನವರು. ಈ ಕಾರಣದಿಂದಲೇ ಕರ್ನಾಟಕ ಸರಕಾರ ಇವರನ್ನು "ಕರ್ನಾಟಕದ ಸಾಂಸ್ಕೃತಿಕ ನಾಯಕ" ಎಂದು ಗುರಿತಿಸಿದ್ದು ನಮಗೆಲ್ಲರಿಗೆ ಸಂತಸ ಉಂಟು ಮಾಡಿದೆ ಆದ್ದರಿಂದ ಅವರ ಆದರ್ಶಗಳನ್ನು ಪ್ರತಿದಿನ ಸ್ಮರಿಸಿಕೊಳ್ಳಬೇಕೆಂದರು.

ಇದಕ್ಕೂ ಪೂರ್ವ ವಿಶ್ವಗುರು ಬಸವಣ್ಣನವರ ಭಾವ ಚಿತ್ರಕ್ಕೆ ಪುಷ್ಪ ನಮನ ಅರ್ಪಿಸುವದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.ಇತ್ತೀಚೆಗೆ ಲಿಟಲ್ ಮಿಸ್ ಇಂಡಿಯಾ 2024 ರ ರನ್ನರ್ ಅಪ ಪ್ರಶಸ್ತಿಗೆ ಭಾಜನರಾದ ಕಿತ್ತೂರಿನ ಹೆಮ್ಮೆಯ ಕುವರಿ ಆರೋಹಿ ಮಲ್ಲಿಕಾರ್ಜುನ ಲಂಗೋಟಿ ಇವರನ್ನು ಸತ್ಕರಿಸಲಾಯಿತು.

ಎಂ.ಕೆ.ಹುಬ್ಬಳ್ಳಿ ಪಟ್ಟಣದ ಕುಮಾರ ವೈಭವ ವಾಲಿ ಇತ್ತೀಚೆಗೆ ನಡೆದ ಪಿ.ಯು.ಸಿ.ದ್ವಿತೀಯ ಪರೀಕ್ಷೆಯಲ್ಲಿ ಶೇ 98.5 ರಷ್ಟು ಅಂಕ ಗಳಿಸುವದರ ಜೊತೆಗೆ ಕನ್ನಡ ವಿಷಯದಲ್ಲಿ 100ಕ್ಕೆ 100 ಅಂಕ ಗಳಿಸಿದ ನಿಮಿತ್ತ ಅವಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು.

ಸಂಗೀತ ಶಿಕ್ಷಕರಾದ ಈಶ್ವರ ಗಡಿಬಿಡಿ ಪ್ರಾರ್ಥಿಸಿದರು. ಶ್ರೀಮತಿ ಶೋಭಾ ಪಾಶ್ಚಾಪೂರ ಸ್ವಾಗತಿಸಿದರು. ತಾಲೂಕ ಕಸಾಪ ಅಧ್ಯಕ್ಷ ಡಾ.ಎಸ್.ಬಿ.ದಳವಾಯಿ ಪ್ರಾಸ್ತಾವಿಕ ನುಡಿಗಳೊಂದಿಗೆ ಮಾಸಿಕ ಶಿವಾನುಭವದ ಉದ್ದೇಶಗಳನ್ನು ತಿಳಿಸಿದರು.

ಕೃತಿ – ಅಕ್ಷರಾ ಇಬ್ಬರು ಜೊತೆ ಸೇರಿ ಬಸವಣ್ಣನವರ ವಚನ ಪಠಿಸಿದರು. ಬುದ್ಧ ಪೂರ್ಣಿಮಾ ನಿಮಿತ್ತವಾಗಿ ಅಖಿಲೇಶ ಮತ್ತು ಅಪೂರ್ವ ಕಳಸಣ್ಣವರ ಸಹೋದರರು ಬುದ್ಧ ಬಸವ ವೇಷ ಧರಿಸಿ ಸಂಭಾಷಣೆ ಎಲ್ಲರನ್ನು ಅಕರ್ಷಿಸಿತು. ಡಾ.ಜಿ.ಕೆ.ಭೂಮನಗೌಡರವರು ಬರೆದ ಕೋವಿಡ್ –19 ನಂತರ ಸಮಾಜ ಎಂಬ ಗ್ರಂಥವನ್ನು ಪೂಜ್ಯರು ಮತ್ತು ಅತಿಥಿಗಳು ಬಿಡುಗಡೆ ಮಾಡಿದರು. ಬೆಳ್ಳಿ ಚುಕ್ಕಿ ರಾಣಿ ಚನ್ನಮ್ಮ ಮಹಿಳಾ ಮಂಡಳದವರಿಂದ ಬಸವಣ್ಣನವರ ಕುರಿತಾದ ಗಾಯನ ನಡೆದವು.

ಪ್ರಸಾದ ಸೇವೆ ಭುವನೇಶ್ವರಿ ಮತ್ತು ಶರಣ ಚಂದ್ರಶೇಖರಯ್ಯ ಇಂಚಗೇರಿಮಠ ದಂಪತಿಗಳು. ಮಹೇಶ್ವರ ಹೊಂಗಲ ವಂದಿಸಿದರು. ವಿವೇಕ ಕುರಗುಂದ ನಿರೂಪಿಸಿದರು.ಸಮಾರಂಭದಲ್ಲಿ ಕಿತ್ತೂರ ನಾಡಿನ ಶರಣ ಶರಣೆಯರು ಉಪಸ್ಥಿತರಿದ್ದರು.

# ಶಾಲಾ ಕೋಣೆಗಳು ಸೋರದಂತೆ ತುರ್ತು ಕ್ರಮಕ್ಕೆ ಸೂಚನೆ



**ಧಾರವಾಡ :** ಜಿಲ್ಲೆಯಲ್ಲಿ ಮಳೆ ಆರಂಭವಾಗಿರುವ ಹಿನ್ನಲೆಯಲ್ಲಿ ಅಂಗನವಾಡಿ, ಶಾಲೆ, ಕಾಲೇಜುಗಳ ಕೋಣೆಗಳು ಸೋರುತ್ತಿರುವ ಬಗ್ಗೆ ಅಧಿಕಾರಿಗಳು ಪರಿಶೀಲಿಸಿ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ತುರ್ತು ನಿಗಾ ವಹಿಸುವಂತೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಅಧಿಕಾರಿಗಳಿಗೆ ಸೂಚನೆ ನೀಡಿ–ದ್ದಾರೆ.

ಬರ ಮುಂಗಾರು ಪೂರ್ವ ಸಿದ್ಧತೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಾ ಶಿಥಿಲಾವಸ್ಥೆಯಲ್ಲಿರುವ ಹಾಗೂ ಸೋರುತ್ತಿರುವ ಅಂಗನವಾಡಿ, ಶಾಲೆ, ಕಾಲೇಜುಗಳ ಕಟ್ಟಡಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ತಕ್ಷಣವೇ ಜೂನ್ 30 ರೊಳಗೆ ತಮಗೆ ವರದಿ ಒಪ್ಪಿಸುವಂತೆ ತಿಳಿಸಿದರಲ್ಲದೆ ಎಲ್ಲಿಯಾದರೂ ತುರ್ತು ರಿಪೇರಿ ಕಾರ್ಯ ಅಗತ್ಯವಿದ್ದಲ್ಲಿ ಪ್ರಸ್ತಾವನೆ ಸಿದ್ಧಪಡಿಸಿ ಕಾರ್ಯಪ್ರವರ್ತರಾಗುವಂತೆ ಸೂಚಿಸಿದರು. ಶಿಥಿಲಾವಸ್ಥೆಯಲ್ಲಿರುವ ಅಥವಾ ಸೋರುತ್ತಿರುವ ಕಟ್ಟಡಗಳಲ್ಲಿ ವಿದ್ಯಾರ್ಥಿಗಳು ಕೂರುವುದು ಎಲ್ಲಿಯಾದರೂ ಗಮನಕ್ಕೆ ಬಂದಲ್ಲಿ ಅಂಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರದಡಿ ಸಣ್ಣ ಪುಟ್ಟ ತುರ್ತು ರಿಪೇರಿಗಳಿಗೆ ಅನುದಾನ ಲಭ್ಯವಿದ್ದು, ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಹಿಳಾ ಮಕ್ಕಳ ಕಲ್ಯಾಣ ಅಧಿಕಾರಿಗಳು ಹಾಗೂ ಪಂಚಾಯತ ರಾಜ್ ಇಂಜಿನೀಯರಿಂಗ್ ಅಧಿಕಾರಿಗಳು ಜಂಟಿಯಾಗಿ ಪ್ರಸ್ತಾವನೆಯನ್ನು ಜೂನ್ 30 ರೊಳಗಾಗಿ ನೀಡುವಂತೆ ತಿಳಿಸಿದರು.

ಮಳೆಗಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ದುರ್ಬಲ ಸೇತುವೆಗಳು, ದುರ್ಬಲ ಕೆರೆ ಬಂಡ್‌ಗಳನ್ನು ಗುರುತಿಸಿ ಅಪಾಯವಿದ್ದಲ್ಲಿ ತಕ್ಷಣವೇ ವರದಿ ನೀಡುವಂತೆ ಲೋಕೋಪಯೋಗಿ, ಸಣ್ಣ ನೀರಾವರಿ, ಪಂಚಾಯತ್ ರಾಜ್ ಇಲಾಖಾ ಅಧಿಕಾರಿಗಳಿಗೆ ತಿಳಿಸಿದರು. ಮಳೆಗಾಲದಲ್ಲಿ ಪ್ರವಾಹದಿಂದ ಜನರಿಗೆ ಸಂಪರ್ಕದ ತೊಂದರೆಯಾಗದಂತೆ ಕ್ರಮ ವಹಿಸಬೇಕೆಂದರು. ಅಳ್ನಾವರದ ಹುಲಿಕೆರೆ ಈಗಾಗಲೇ ದುರಸ್ತಿಯಾಗಿದ್ದು, ನಿಗದಿ ಕೆರೆ ದುರಸ್ತಿಗೆ ಟೆಂಡರ್ ಕರೆಯಲಾಗಿದೆ ಎಂದು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ತಹಶೀಲ್ದಾರರು ಹಾಗೂ ತಾಲೂಕು ಪಂಚಾಯತ ಇಓ.ಗಳು ತಮ್ಮ ವ್ಯಾಪ್ತಿಯಲ್ಲಿಯ ಅಪಾಯಕಾರಿ ಹಳ್ಳ, ಕೊಳ್ಳ, ಕೆರೆಗಳ ಬಗ್ಗೆ ಗಮನಹರಿಸತಕ್ಕದ್ದು. ಮಕ್ಕಳು ಕೆರೆಯಲ್ಲಿ ಈಜಲು ಹೋಗದಂತೆ ಆಯಾ ಸ್ಥಳಗಳಲ್ಲಿ ಮುಂಜಾಗೃತಾ ಅಪಾಯದ ಸ್ಥಳವೆಂದು ಬೋರ್ಡಗಳನ್ನು ಹಾಕಿಸಿ ಡಂಗೂರ ಹೊಡಿಸಬೇಕೆಂದು ತಿಳಿಸಿದರು. ಮಳೆಗಾಲದಲ್ಲಿ ಯಾವುದೇ ಜೀವಹಾನಿ ಆಗದಂತೆ ಅಧಿಕಾರಿಗಳು ಮುನ್ನೆಚ್ಚರಿಕಾ ಕ್ರಮ ಅನುಸರಿಸಲು ತಿಳಿಸಿದರು.

ಹೆಸ್ಕಾಂ ಅಧಿಕಾರಿಗಳು ಅಪಾಯಕಾರಿ ವಿದ್ಯುತ್ ಕಂಬ ಹಾಗೂ ತಂತಿಗಳ ಬಗ್ಗೆ ತಕ್ಷಣ ಗಮನಹರಿಸಿ ಮುಂಜಾಗೃತಾ ಕ್ರಮವಾಗಿ ದುರಸ್ತಿ ಮಾಡತಕ್ಕದು. ವಿದ್ಯುತ್ ತಂತಿಗಳ ಮೇಲಿರುವ ಗಿಡ, ಮರಗಳ ಟೊಂಗೆಗಳನ್ನು ಕಟಾವು ಮಾಡುವಂತೆ ಸೂಚಿಸಿದರು. ನವಲಗುಂದ ತಾಲೂಕಿನ ಬೆಣ್ಣಿಹಳ್ಳ ಹಾಗೂ ತುಪ್ಪರಿಹಳ್ಳದಲ್ಲಿ ಪ್ರವಾಹದ ಬಗ್ಗೆ ಸ್ಥಳದ ತಹಶೀಲ್ದಾರ ಈಗಾಗಲೇ ಎಚ್ಚರಿಕೆ ವಹಿಸಿತಕ್ಕದ್ದು. 26 ಗ್ರಾಮಗಳ ವರದಿ ಸಿದ್ಧಪಡಿಸಿ ಕಾರ್ಯಪ್ರವರ್ತರಾಗುವಂತೆ ತಿಳಿಸಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಕಲುಷಿತ ನೀರು ಕುಡಿಯುವ ನೀರಿಗೆ ಸೇರಿ ಸಾಂಕ್ರಾಮಿಕ ರೋಗ ಹರಡದಂತೆ ಸಂಬಂಧಿಸಿದ ಅಧಿಕಾರಿಗಳು ಪ್ರತಿದಿನ ಜಲಮೂಲಗಳ ಗುಣಮಟ್ಟ ಪರೀಕ್ಷಿಸತಕ್ಕದ್ದು. ನೀರಿನ ಟ್ಯಾಂಕ್‌ಗಳನ್ನು ಕಡ್ಡಾಯವಾಗಿ ಸ್ವಚ್ಛಗೊಳಿಸತಕ್ಕದ್ದು. ನೀರಿನ ಕೆಮಿಕಲ್ ಹಾಗೂ ಜೈವಿಕ ಪರೀ–ಕ್ಷೆ ನಡೆಸಬೇಕು. ಆರೋಗ್ಯ ಇನ್ಸಪೆಕ್ಟರ್‌ಗಳು, ವಾಟರ್ಮ್ಯಾನ್‌ಗಳು ಕಡ್ಡಾಯವಾಗಿ ಈ ಬಗ್ಗೆ ಎಚ್ಚರ ವಹಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಾಲಂ ಹುಸೇನ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ತಹಶೀಲ್ದಾರರು ಉಪಸ್ಥಿತರಿದ್ದರು.

# ಕನ್ನಡ ಭಾಷೆ ಉಳಿವಿಗಾಗಿ ಜೀವ ಸವೆಸಿದವರು: ಪ್ರೋ. ಶೇಷಗಿರಿರಾವ್




**ಧಾರವಾಡ :** ಇಂಗ್ಲೀಷ ಸಾಹಿತ್ಯವನ್ನುಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿದವರಲ್ಲಿ ಮೊದಲಿಗರಲ್ಲದೇಕನ್ನಡ ಸಾಹಿತ್ಯದಲ್ಲಿ ವಿಮರ್ಶಾ ಲೋಕಕ್ಕೆ ಮಾರ್ಗ ಹಾಕಿಕೊಟ್ಟವರು ಪ್ರೊ. ಎಲ್.ಎಸ್. ಶೇಷಗಿರಿರಾವ್‌ಎಂದು ಬೆಂಗಳೂರಿನ ಹಿರಿಯ ಲೇಖಕ, ಕನ್ನಡಪರ ಹೋರಾಟಗಾರರಾ.ನಂ. ಚಂದ್ರಶೇಖರ ಹೇಳಿದರು.

ಅವರುಕರ್ನಾಟಕ ವಿದ್ಯಾವರ್ಧಕ ಸಂಘವು, ದಿ.ಪ್ರೊ. ಎಲ್.ಎಸ್. ಶೇಷಗಿರಿರಾವ್‌ಜನ್ಮಶತಮಾನೋತ್ಸವ ನಿಮಿತ್ತಆಯೋಜಿಸಿದ್ದ 'ಎಲ್.ಎಸ್.ಎಸ್. ಅವರ ಬದುಕು–ಬರಹ' ವಿಶೇಷ ಉಪನ್ಯಾಸಕಾರ್ಯಕ್ರಮಉದ್ಘಾಟಿಸಿ ಮಾತನಾಡಿದರು.

ಇಪ್ಪತ್ತು ಸಾವಿರಕ್ಕೂ ಹೆಚ್ಚು ಪುಟಗಳಷ್ಟು ಸಾಹಿತ್ಯ ಬರೆದಿದ್ದಾರೆ. ಹದಿನೆಂಟು ಸಾವಿರಕ್ಕಿಂತ ಹೆಚ್ಚು ಪುಟಗಳನ್ನು ಸಂಪಾದನೆ ಮಾಡಿ, ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಬರೆದವರುಕನ್ನಡಿಗರಿಲ್ಲ. ನೂರಾರುಕನ್ನಡ ಚಳುವಳಿಗಳಲ್ಲಿ ಭಾಗವಹಿಸಿ ಕನ್ನಡ ಭಾಷೆಯ ಉಳಿವಿಗಾಗಿ ಜೀವ ಸವೆಸಿದವರು. ಶೇಷಗಿರಿಯವರದುದ್ದೈತ್ಯ ಶಕ್ತಿ.ಸಾಹಿತಿಯಾಗಿ, ಚಳುವಳಿಗಾರಗಾಗಿ, ಆಡಳಿತಗಾರರಾಗಿ, ಶಿಕ್ಷಕರಾಗಿ ಹೀಗೆ ಬಹುಮುಖವಾಗಿ ಜೀವನದುದ್ದಕ್ಕೂಕಾರ್ಯ ಮಾಡಿದರು ಎಂದರು.

ಶೇಷಗಿರಿರಾವ್‌ರ ಬದುಕು–ಬರಹಕುರಿತು ಮಾತನಾಡಿದಡಾ. ಜಿ. ಎಂ. ಹೆಗಡೆ, ಎಲ್.ಎಸ್. ಶೇಷಗಿರಿರಾವ್‌ರು ಹತ್ತಾರುಕನ್ನಡ ಚಳುವಳಿಗಳನ್ನು ಬೆಂಗಳೂರು ನೆಲದಲ್ಲಿಕಟ್ಟಿದವರು. ಅಂದಿನಗಿಂತ ಇಂದು ಕನ್ನಡ ಚಳುವಳಿಗಳ ಅವಶ್ಯಕತೆಇದೆ.ಕಾಲೇಜುಗಳಲ್ಲಿ ಕನ್ನಡಉಪನ್ಯಾಸಕರ ನೇಮಕಾತಿಇಲ್ಲ. ಕನ್ನಡ ಪ್ರಾಥಮಿಕ ಶಾಲೆಗಳು ಮುಚ್ಚಿಕೊಳ್ಳುತ್ತಿವೆ. ಇವುಗಳ ವಿರುದ್ಧಕನ್ನಡಿಗರು ಬೀದಿಗಿಳಿದು ಹೋರಾಟ ಮಾಡಬೇಕಾಗಿದೆಎಂದ ಹೆಗಡೆಎಲ್.ಎಸ್. ಮಕ್ಕಳ ಸಾಹಿತ್ಯ ಮೊದಲಗೊಂಡುಎಲ್ಲ ಸಾಹಿತ್ಯ ಪ್ರಕಾರಗಳನ್ನು ನೀಡಿದರು.ಜ್ಞಾನ ಭಾರತಿ, ಕನ್ನಡ ಭಾರತಿ, ಕಿರಿಯರಕರ್ನಾಟಕ ಹೀಗೆ ಬ್ರಹತ್ ಗೃಂಥಗಳನ್ನು ನೀಡಿದಂತೆಇನ್ನೊಬ್ಬರು ನೀಡಿಲ್ಲ. ಶೇಷಗಿರಿರಾವ್ ನುಡಿ–ದಂತೆಬದುಕಿದರು.ಬದುಕಿದಂತೇನುಡಿದರು.ನಿಘಂಟುಗಳ ತಜ್ಞರಾಗಿಕನ್ನಡ, ಇಂಗ್ಲೀಷ ನಿಘಂಟುಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದರು.ಪ್ರಗತಿಶೀಲ ಸಾಹಿತ್ಯದಲ್ಲಿ ಬಹುದೊಡ್ಡಕಾರ್ಯಮಾಡಿದರುಎಂದುಅವರಸಾಹಿತ್ಯಗಳ ಪ್ರಕಾರಗಳನ್ನು ಪರಿಚಯಿಸಿದರು.

ಅಧ್ಯಕ್ಷತೆ ವಹಿಸಿದ್ದ ಹಾವೇರಿಯ ಗಳಗನಾಥ, ನಾ.ಶ್ರೀ. ರಾಜಪುರೋಹಿತ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ದುಷ್ಯಂತ ನಾಡಗೌಡ ಮಾತನಾಡಿ ಹೊಸ ಸಾಹಿತ್ಯ ಹೊಸ ಭಾಷೆ ಬರಬೇಕೆಂದರೆಜೀವನ ವಿಕಸನಗೊಳ್ಳಬೇಕು ಎಂದರು.

ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ವೇದಿಕೆ ಮೇಲಿದ್ದರು.ಗುರು ಹಿರೇಮಠ ಸ್ವಾಗತಿಸಿದರು.ಶಂಕರ ಹಲಗತ್ತಿಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿಡಾ.ಅರವಿಂದ ಯಾಳಗಿ, ಡಾ. ಶಾಮಸುಂದರ ಬಿದರಕುಂದಿ, ಅಶೋಕ ನಿಡವಣಿ, ಲಕ್ಷ್ಮೀ ಕೊಟಗುಣಸಿ ಸೇರಿದಂತೆ ಮುಂತಾದವರಿದ್ದರು.

# ತಾಳಿಕೋಟೆಯಲ್ಲಿ ಭಾವೈಕ್ಯತೆ ಸಾರುವ ಪಂಚಸೈಯದ ದರ್ಗಾ ಉರುಸು

**ತಾಳಿಕೋಟೆ :** ರಾಜ್ಯದ ಪ್ರಮುಖ ದರ್ಗಾಗಳಲ್ಲಿ ಒಂದಾದ ತಾಳಿಕೋಟೆ ಪಟ್ಟಣದಲ್ಲಿಯ ಹಜರತ್ ಫೀರ ಪಂಚಸೈಯದ ದರ್ಗಾ ಉರುಸು ದಿ.25 ಶನಿವಾರರಂದು ಭಕ್ತಿಭಾವದೊಂದಿಗೆ ಜರುಗಿತು.

ಹಬ್ಬ ಹರಿದಿನಗಳು ಜಾತ್ರೆ, ಉರುಸು, ಉತ್ಸವಗಳು ಯಾವುದೇ ಬೇದ ಭಾವವಿಲ್ಲದೇ ಆಚರಿಸಿಕೊಂಡು ಬರುವುಗಳಾಗಿದ್ದು ಅದರಂತೆ ತಾಳಿಕೋಟೆಯಲ್ಲಿ ಹಿಂದೂ–ಮುಸ್ಲಿಂ ಭಾವೈಕ್ಯತೆ ಸಾರುತ್ತಾ ಸಾಗಿ ಬಂದಿರುವ ಹಜರತ್ ಫೀರ್ ಪಂಚಸೈಯದ ದರ್ಗಾ ಉರುಸಿಗೆ ಆಗಮಿಸಿದ ಭಕ್ತಾದಿಗಳು ಎಡೆ, ಸಕ್ಕರೆ, ಕಾಯಿ, ಕರ್ಪೂರ, ಲೋಭಾನ, ದರ್ಗಾ–ಕ್ಕೆ ನೀಡುವದರೊಂದಿಗೆ ಭಾವೈಕ್ಯತೆ ಮೆರೆದಿದ್ದೇನು ಕಡಿಮೇನಿಲ್ಲಾ.

ಜಾತಿ, ಧರ್ಮ, ಭಾಷೆ, ಉಡುಗೆ, ತೊಡುಗೆ ಬೇರೆ–ಯಾದರೂ ದೇಶದಲ್ಲಿ ಏಕತೆ ಎಂಬುದು ಇದೆ ಈ ದೇಶ ಏಕತೆಯೊಂದಿಗೆ ಮುನ್ನಡೆಯುತ್ತಾ ಸಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲವಷ್ಟೇ. ದೇಶದಲ್ಲಿ ಅನೇಕ ಧರ್ಮಿಯರಿದ್ದರೂ ಆಯಾ ಧರ್ಮಗಳಲ್ಲಿ ಯಾವ ತಪ್ಪುಗಳು ಇರುವದಿಲ್ಲಾ ಕಾರಣ ಮಾನವರೆಲ್ಲರೂ ಒಂದಾಗಿ ನೆಮ್ಮದಿಯಿಂದ ಬಧುಕಬೇಕೆಂಬುದು ಧರ್ಮಗಳು ಹೇಳುತ್ತಾ ಸಾಗಿವೆ ನ್ಯಾಯದಿಂದ ಬಧುಕು ಸಾಗಿಸಬೇಕು ಬೇರೆಯವರ ಒಳಿತಿಗಾಗಿ ಬಧುಕಬೇಕು ಎಂಬುದನ್ನು ಧರ್ಮಗಳು ಹೇಳಿದಂತೆ ಬಿದ್ದವರನ್ನು ಮೇಲಕ್ಕೆ ಎತ್ತುವ ಕಾರ್ಯ ಮಾಡುತ್ತಾ ಸಾಗಬೇಕೆಂಬುದು ಎಲ್ಲ ಧರ್ಮಗಳ ಉದ್ದೇಶವಾಗಿದೆ ಎಂದು ಹೇಳಬಹುದಾಗಿದೆ.

ಬೇರೆ ಧರ್ಮವನ್ನು ಹೀಯಾಳಿಸುವದು ಬೇಡಾ ಹಿಂದೂ–ಮುಸ್ಲಿಂ ಧರ್ಮಗಳೆರಡೂ ಒಂದಾದ–ರೆ ಸದೃಢ ದೇಶ ಕಟ್ಟಲು ಸಾದ್ಯವೆಂಬುದನ್ನು ಈ ಹಿಂದಿನಿಂದಲೂ ಪ್ರಜ್ಞಾವಂತರು ಹೇಳುತ್ತಾ ಸಾಗಿಬಂದಿದ್ದಾರಲ್ಲದೇ ಈ ಮಾತೂ ಸಹ ಹಿರಿಯರದ್ದಾಗಿದೆ ಎಂದರೆ ತಪ್ಪಾಗಲಾರದು.

# ವೃದ್ಧಾಶ್ರಮದಲ್ಲಿ ಸಾಮೂಹಿಕ ಹುಟ್ಟುಹಬ್ಬ ಆಚರಣೆ




**ಬೆಳಗಾವಿ :** ನಗರದ ದೇವರಾಜ ಅರಸ ಕಾಲನಿಯಲ್ಲಿರುವ ನಾಗನೂರು ಶ್ರೀ ರುದ್ರಾಕ್ಷಿಮಠದ ಶ್ರೀಮತಿ ಚಿನ್ನಮ್ಮಾ ಬ ಹಿರೇಮಠ ವೃದ್ಧಾಶ್ರಮದಲ್ಲಿ ಹಿರಿಯ ನಾಗರಿಕರ ಸಾಮೂಹಿಕ ಹುಟ್ಟುಹಬ್ಬವನ್ನು ಕೇಕ ಕತ್ತರಿಸುವ ಮೂಲಕ ಆಚರಿಸಲಾಯಿತು. ಹಿರಿಯ ನಾಗರಿಕರು ಹುಟ್ಟುಹಬ್ಬವನ್ನು ಆಚರಿಸಿಕೊಂಡು ಸಂಭ್ರಮಿಸಿದರು.

ಸರಕಾರಿ ಪ್ರಾಥಮಿಕ ಶಾಲೆ ಚಿಲಭಾಂವಿಯ ಮುಖ್ಯೋಪಾಧ್ಯಾಯರಾದ ಮಲ್ಲಿಕಾರ್ಜುನ ಮಗದುಮ್ಮ ಮಾತನಾಡಿ ಹಿರಿಯ ನಾಗರಿಕರು ಸಮಾಜದ ಆಸ್ತಿ ಅವರನ್ನು ಗೌರವಿಸುವುದು ನಮ್ಮ ಕರ್ತವ್ಯ ಮಕ್ಕಳಿಗೆ ಚಿಕ್ಕಂದ್ದಿನಿಂದಲೆ ಸಂಸ್ಕಾರವನ್ನು ಕಲಿಸುವುದು ಅವಶ್ಯವಾಗಿದೆ. ಇತ್ತಿಚಿನ ಆಧುನಿಕ ಸಮಾಜದಲ್ಲಿ ಮಕ್ಕಳು ಪಾಲಕರನ್ನು ವೃದ್ಧಾಶ್ರಮದಲ್ಲಿ ಬಿಟ್ಟು ಹೋಗುತ್ತಿರುವ ಸಂಗತಿಗಳಿಗೆ ವಿಷಾಧ ವ್ಯಕ್ತಪಡಿಸಿದರು.

ವೃದ್ಧಾಶ್ರಮದ ಸಂಯೋಜ–ಕರಾದ ಎಂ ಎಸ್ ಚೌಗಲಾ ಮಾತನಾಡಿ ವೃದ್ಧಾಶ್ರಮದ ಹಿರಿಯ ನಾಗರಿಕರಿಗೆ ಯಾವುದೇ ಕೊರತೆಯಾಗದಂತೆ ಮೂಲಭೂತ ಸೌಕರ್ಯಗಳನ್ನು ನಾಗನೂರು ಟ್ರಸ್ಟ ಮೂಲಕ ಒದಗಿಸಲಾಗುತ್ತಿದೆ. ಸಾಮೂಹಿಕ ಹುಟ್ಟುಹಬ್ಬ ಆಚರಣೆ ಮಾಡುವ ಮೂಲಕ ಕುಟುಂಬದ ಸದಸ್ಯರ ಪ್ರೀತಿ ವಾತ್ಸಲ್ಯ ಆರೈಕೆ–ಯ ಕೊರತೆ ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪಾಂಚಜನ್ಯ ಐ ಎ ಎಸ್ ತರಬೇತಿ ಕೇಂದ್ರದ ವ್ಯವಸ್ಥಾಪಕರಾದ ಡಾ ನವೀನ ಮಗದುಮ್ಮ, ಪ್ರವೀಣ ಮಗದುಮ್ಮ ಹಾಗೂ ನಿವೃತ್ತ ಅಭಿಯಂತರರಾದ ಶಿವಾನಂದ ಖಾನಪೇಟ, ವೀಣಾ ಖಾನಪೇಟ ಉಪಸ್ಥಿತರಿದ್ದರು.

# ಎಲ್ಲ ಸಂಪತ್ತಿಗಿಂತ ಆರೋಗ್ಯಸಂಪತ್ತು ದೊಡ್ಡದು: ವೇ॥ ಮುರುಘೇಶ



**ತಾಳಿಕೋಟೆ :** ಗಳಿಕೆ ಆಸ್ತಿ ಅಂತಸ್ತು ಇವು ಯಾವುಗಳು ನಮ್ಮ ಜೊತೆ ಬರುವುದಿಲ್ಲಾ ದಿನನಿತ್ಯ ಜೊತೆಯಾಗಿರುವುದೇ ಆರೋಗ್ಯ ಸಂಪತ್ತೆನ್ನುವುದು ಮಹಾ ಸಂಪತ್ತಾಗಿ ಪರಿಣಮಿಸಿದೆ ಈಕುರಿತು ಋಷಿಮುನಿಗಳು ಅನೇಕ ಆರೋಗ್ಯ ತಜ್ಞರು ಹೇಳುತ್ತಾ ಸಾಗಿಬಂದಿರುವುದು ಇದರಲ್ಲಿ ಏನೂ ತಪ್ಪಿಲ್ಲವೆಂದು ಶ್ರೀ ಖಾಸ್ಗತೇಶ್ವರ ಮಠದ ಉಸ್ತುವರಿಯಾದ ವೇ॥ ಮುರುಘೇಶ ವಿರಕ್ತಮಠ ಅವರು ನುಡಿದರು.

ಶುಕ್ರವಾರರಂದು ಶ್ರೀ ಬಿಎಂ ಪಾಟೀಲ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ವಿಜಯಪುರ ಹಾಗೂ ಶ್ರೀ ಖಾಸ್ಗತೇಶ್ವರ ಮಠ ತಾಳಿಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾದ ಉಚಿತ ಆರೋಗ್ಯ ತಪಾಸಣಾ ಶಿಭಿರವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದ ಅವರು ಹಿಂದಿನ ಕಾಲದಲ್ಲಿ ಮಕ್ಕಳಿಗೆ ಹಿರಿಯರು ಆರೋಗ್ಯವಂತ ಭಾವನೆ ಮೂಡಿಸುತ್ತಾ ಸಾಗಿಬಂದಿದ್ದರು ಇಂದಿನ ದಿನಮಾನದಲ್ಲಿ ಅದು ಮರೆತುಹೋದಂತೆ ಕಾಣುತ್ತದೆ ಒಳ್ಳೆಯ ಆಹಾರ ಸೇವನೆ ಹಾಗೂ ದಿನನಿತ್ಯ ವ್ಯಾಯಾಮದಂತಹ ಅಲ್ಲದೇ ಯೋಗ ಗಳಂತಹ ಸಾದನೆಗಳನ್ನು ಮಾಡುತ್ತಾ ಸಾಗಿದರೆ ಆರೋಗ್ಯದಲ್ಲಿ ಯಾವ ಏರಾಪೇರು ಆಗುವದಿಲ್ಲಾ ಎಂದು ಹೇಳಿದ ಅವರು ಇಂದು ವಿಜಾಪೂರದ ಸುಪರ್ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಏರ್ಪಡಿಸಲಾದ ಉಚಿತ ಆರೋಗ್ಯ ತಪಾಸಣಾ ಶಿಭಿರವು ಇದು ಮಹತ್ವದ ಶಿಬಿರಾಗಿ ಮಾರ್ಪಟ್ಟಿದೆ ಎಂದ ಅವರು ಬಡ ಬಗ್ಗರ ಭಗ್ಗೆ ಕಾಳಜಿ ವಹಿಸಿ ವಿವಿಧ ರೋಗಗಳ ತಪಾಸಣೆ ನಡೆಸುತ್ತಾ ಸಾಗಿ ಬಂದ ಬಿಎಂ ಪಾಟೀಲ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸೇವಾ ಕಾರ್ಯ ಅಲ್ಲದೇ ಸಿಬ್ಬಂದಿಗಳ ಕಾರ್ಯ ಪ್ರಶಂಶನೀಯವಾಗಿದೆ ಎಂದರು.

ಇನ್ನೋರ್ವ ಬಿಎಲ್‌ಡಿ ಆಸ್ಪತ್ರೆಯ ನರರೋಗ ತಜ್ಞರಾದ ಡಾ. ವಿರುಪಾಕ್ಷ ಬಿರಾದಾರ ಅವರು ಮಾತನಾಡಿ ಅತಿಯಾದ ರಕ್ತದೊತ್ತಡದಿಂದ ಶುಗರ್ ಎಂಬುವುದು ಕಂಟ್ರೋಲ್ ಆಗುವದಿಲ್ಲಾ ಮಧ್ಯಪಾನ ಸೇವನೆ ಹಾಗೂ ಮಾನಸೀಕ ಒತ್ತಡ ಇರುವಂತಹ ವ್ಯಕ್ತಿಗೆ ಈ ನರ–ರೋಗ ಖಾಯಿಲೆ ಬರಲು ಸಾಧ್ಯವಿದೆ ಎಂದರು 40 ವರ್ಷ ಮೇಲ್ಪಟ್ಟು ವಯೋಮಿಇ ಹೊಂದಿದವರು ನಿಯಮಿತವಾಗಿ ಶುಗರ್ ಕುರಿತು ತಪಾಸಣೆ ಮಾಡಿಸಿಕೊಳ್ಳುವುದು ಒಳಿತು ದಿನನಿತ್ಯ ವ್ಯಾಯಾಮ ಲ ಘ್ ು ವ ್ಯಾ ಂ ು ್ ು ಾ ವ ್ ು ಮಾಡಿಕೊಳ್ಳುವುದನ್ನು ರೂಢಿ ಮಾಡಿಕೊಳ್ಳಬೇಕು.

ಶುಗರ್ ಬಿಪಿ ಇದ್ದವರು ವೈದ್ಯರ ಸಲಹೆ ಮೇರೆಗೆ ನಡೆದುಕೊಳ್ಳಬೇಕು ವ್ಯಾಯಾಮದೊಂದಿಗೆ ಯೋಗ, ಧ್ಯಾನ, ಕ್ರಮಬದ್ದ ಆಹಾರ ಸೇವನೆ ಮಾಡಬೇಕು ಇದರಿಂದ ನರ–ರೋಗ ನರಗಳ ದೌರ್ಬಲ್ಯಗಳನ್ನು ದೂರಿಕರಿಸಬಹುದೆಂದರು.

ಇನ್ನೋರ್ವ ಹೃದಯಶಸ್ತ್ರ ವಿಭಾಗದ ತಜ್ಞವೈದ್ಯರಾದ ಡಾ. ಜಯಕೃಷ್ಣ ಮಿಶ್ರಾ ಅವರು ಮಾತನಾಡಿ ತೇಲಕಟ್ ಹೊಂದಿದ ಊಟ ತುಪ್ಪ ಅಲ್ಲದೇ ಪಾಮ್ ಆಯಿಲ್ ಮತ್ತು ಮಟನ್ ಚರಬಿ ಗಳಂತವುಗಳು ಸೇವಿಸುವದರಿಂದ ಹೃದಯ ಖಾಯಿಲೆ ಬರುವ ಸಾಧ್ಯತೆಯಿದೆ ವೈದ್ಯರು ಎದೆ ನೋವು ಎಂಬುದನ್ನು ತಿಳಿಸಿದಾಗ ಬಹಳೆ ಎಚ್ಚರದಿಂದ ಕೆಲಸ ಕಾರ್ಯಗಳಿಗೆ ಮುಂದಾಗಬೇಕು ಎದೆನೋವು ಬಂದಾಗ ಚಕ್ರ ಬರುವ ಸಾಧ್ಯತೆಯಿದೆ ಕೂಡಲೇ ಆಸ್ಪತ್ರೆಗೆ ತೆರಳಿ ವೈದ್ಯರ ಸಲಹೆ ಪಡೆಯಬೇಕೆಂದು ಹೇಳಿದ ಅವರು ಶುಗರ್ ಬಿಪಿ ಕಂಟ್ರೋಲ್ ದಲ್ಲಿದ್ದರೆ ಹಾರ್ಟ್ ಪ್ರಾಬ್ಲಮ್ ಬರುವುದಿಲ್ಲವೆಂದು ಕೆಲವು ಸಲಹೆ ಸೂಚನೆಗಳನ್ನು ನೀಡಿ–ದರು. ಇನ್ನೋರ್ವ ಅತಿಥಿ ಹಿರಿಯ ಪತ್ರಕರ್ತ ಜಿ.ಟಿ. ಘೋರ್ಪಡೆ ಅವರು ಮಾತನಾಡಿ ಬಿಎಂ ಪಾಟೀಲ ಸೂಪರ್ ಆಸ್ಪತ್ರೆ ಈ ಹಿಂದೆ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಇಂದಿನಂತಹ ಉಚಿತ ರೋಗ ತಪಾಸಣಾ ಕಾರ್ಯ ಕೈಕೊಳ್ಳುತ್ತಾ ಸಾಗಿಬಂದಿದೆ ಇದ–ರಿಂದ ಬಡಬಗ್ಗರಿಗೆ ಬಹಳೇ ಅನುಕೂಲವಾಗಿದೆ ಅಂತಹ ಒಳ್ಳೆಯ ಸೇವಾ ಕಾರ್ಯವನ್ನು ಇಂದು ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠದಲ್ಲಿ ಏರ್ಪಡಿಸಿರುವುದು ಸಂತಸ ತಂದಿದೆ ಎಂದು ಬಿಎಲ್‌ಡಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾರ್ಯ ವೈಖರಿಗಳ ಕುರಿತು ಶ್ಲ್ಯಾಘಿಸಿದರು.

ಇನ್ನೋರ್ವ ಆಡಳಿತಾಧಿಕಾರಿಗಳಾದ ಶಾಂತೇಶ ಸಲಗಾರೆ ಅವರು ಮಾತನಾಡಿ ಶಿಭಿರದಲ್ಲಿ ಪಾಲ್ಗೊಂಡ ಶಿಬಿರಾರ್ಥಿಗಳಿಗೆ ತಿಳುವಳಿಕೆ ನೀಡಿ ಈ ಶಿಭಿರದಲ್ಲಿ ಪಾಲ್ಗೊಂಡವರು ವಿಂಜಯಪುರ ಆಸ್ಪತ್ರೆಗೆ ಆಗಮಿಸುವ ಸಮಯದಲ್ಲಿ ತಮ್ಮ ರೇಷನ್ ಕಾರ್ಡ್, ಆಧಾರ್ ಕಾರ್ಡ್‌ಗಳನ್ನು ತಪ್ಪದೇ ತರಬೇಕು ಇದು ಅಲ್ಲದೇ ಈ ಶಿಭಿರದಲ್ಲಿ ನೀಡಲಾದ ಓಪಿಡಿ ಕಾರ್ಡ್ ನ್ನು ತರಬೇಕೆಂದು ಶಿಭಿರಾರ್ಥಿತಳಿಗೆ ತಿಳಿಹೇಳಿದರು.

ಒಟ್ಟು ಈ ಶಿಬಿರದಲ್ಲಿ 103 ರನ್ನು ತಪಾಸಣೆ ಕೈಕೊಳ್ಳಲಾಯಿತಲ್ಲದೇ ಮೂತ್ರಜನಕಾಂಗ ಶಸ್ತ್ರಚಿಕಿತೆಗೆ ಸಂಬಂದಿಸಿದ 15 ರೋಗಿಗಳನ್ನು ಆಯ್ಕೆ ಮಾಡಲಾಯಿತು. ಹೃದಯರೋಗ ಶಸ್ತ್ರ ಚಿಕಿತ್ಸೆಗೆ ಸಂಭಂದಿಸಿದ 48 ಜನರನ್ನು ಹಾಗೂ ನರರೋಗ ಶಸ್ತ್ರಚಿತ್ಸೆಗೆ ಸಂಬಂದಿಸಿದ 40 ಜನರನ್ನು ಹಾಗೂ ಸಕ್ಕರೆ ಖಾಯಿಲೆ ರೋಗಿಗೆ ಸಂಭಂದಿಸಿದ 72 ಜನರನ್ನು ಆಯ್ಕೆ ಮಾಡಲಾಯಿತಲ್ಲದೇ 40 ಜನರಿಗೆ ಇಸಿಜಿ ಮಾಡಲಾಯಿತಲ್ಲದೇ ಎಲ್ಲ ರೋಗಗಳ ಸಂಭಂದಿತ ರಕ್ತದೊತ್ತಡ, ನಾಡಿಮಿಡಿತ, ದೇಹತೂಕ ಸಂಭಂದಿಸಿದಂತೆ ವೈದ್ಯರು ಸಮಾಲೋಚನೆ ನಡೆಸಿ ತಿಳುವಳಿಕೆ ನೀಡಲಾಯಿತು.

ಈ ವೈದ್ಯರ ತಂಡದಲ್ಲಿ ಮೂತ್ರಶಸ್ತ್ರ ವಿಭಾಗದ ಡಾ. ದೃವ ಎಚ್‌ಎಂ, ಡಾ. ವೀರಪ್ಪ ಕೊಟಗಿ, ಹೃದಯ ಶಸ್ತ್ರ ವಿಭಾಗದ ಡಾ. ಸುನೀಲ್, ಹಾಗೂ ನರ್ಸಿಂಗ್ ಸ್ಟಾಫ್ ಕಲ್ಲಪ್ಪ ಸಾರವಾಡ, ದ್ರಾಕ್ಷಾಯಣಿ ಶೆಟಗಾರ, ದಿವ್ಯಶ್ರೀ ಜಾಲವಾದಿ, ರಾಜನ್ ಚವ್ಹಾಣ, ಪ್ರಜ್ವಲ್ ಹುಡೇದ, ಪ್ರೀಯಾ ಮಾಳಿ, ಸ್ನೇಹಾ ಡಿ, ಸ್ಪಂದನಾ ಎಚ್, ಸಿಬ್ಬಂದಿವರ್ಗದವರಾದ ಅಣ್ಣಾಸಾಬ ಇಚಿಡಿ, ಅನೀಲ ಪೂಜಾರಿ, ಅನೀಷಾ, ಕಸ್ತೂರಿ, ಮಹೇಶ, ಶಶಿಕಾಂತ, ತಾಳಿಕೋಟೆ ಖ್ಯಾತ ಔಷಧಿ ವ್ಯಾಪಾರಿಗಳಾದ ರಮೇಶ ಸಾಲಂಕಿ ಮೊದಲಾದವರು ಉಪಸ್ತಿತರಿದ್ದರು. ಸಿಬ್ಬಂದಿಯಾದ ಪ್ರೀತು ದಶವಂತ ಸ್ವಾಗತಿಸಿದರು. ಸಹಾಯಕ ಸಂಪರ್ಕಾಧಿಕಾರಿ ಚನ್ನಬಸವ ಕೊಟಗಿ ವಂದಿಸಿದರು.

# ಭೂ-ಮಾಫಿಯಾ ಮಟ್ಟ ಹಾಕಲು ಮಾಜಿ ಸಚಿವ ಪಟ್ಟಣಶೆಟ್ಟಿ ಆಗ್ರಹ

ವರದಿ:ಲಾಲಸಾಬ ಸವಾರಗೋಳ



**ವಿಜಯಪುರ :** ನಗರದಲ್ಲಿ ನಕಲಿ ಭೂ ದಾಖಲೆ ಸೃಷ್ಟಿಸಿ ಜನರನ್ನು ವಂಚಿಸುತ್ತಿರುವ ಭೂ-ಮಾಫಿಯಾವನ್ನು ಸಂಪೂರ್ಣವಾಗಿ ಮಟ್ಟ ಹಾಕಬೇಕೆಂದು ಮಾಜಿ ಸಚಿವ ಅಪ್ಪಾಸಾಹೇಬ(ಅಪ್ಪು) ಮ. ಪಟ್ಟಣಶೆಟ್ಟಿ ಆಗ್ರಹಿಸಿದ್ದಾರೆ.

ಈ ಕುರಿತು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಬೇಟಿ ಮಾಡಿ ಮನವಿ ಮಾಡಿದ ಅವರು, ನಗರದಲ್ಲಿ ನಕಲಿ ಭೂ-ದಾಖಲೆ ಸೃಷ್ಟಿ ಮಾಡಿ ಜನರನ್ನು ದೊಡ್ಡ ಪ್ರಮಾಣದಲ್ಲಿ ವಂಚನೆ ಮಾಡುತ್ತಿರುವ ಅನೇಕ ಪ್ರಕರಣಗಳು ನಡೆಯುತ್ತಿವೆ. ಇದರಿಂದ ಬಡಜನರು ನಿತ್ಯ ಶೋಷಣೆಗೊಳಗಾಗುತ್ತಿದ್ದಾರೆ. ಜಮೀನು ಹಾಗೂ ನಿವೇಶನಗಳ ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಉಪನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಖರೀದಿ ಹಾಗೂ ಮಾರಾಟ ಮಾಡುವ ಕಾನೂನು ಬಾಹಿರ ಕೃತ್ಯಗಳು ಅವ್ಯಾಹತವಾಗಿ ನಡೆದಿವೆ. ಜನರನ್ನು ವಂಚಿಸುವ ವ್ಯವಸ್ಥಿತ ಜಾಲವೇ ಜಿಲ್ಲೆಯಲ್ಲಿ ಹುಟ್ಟಿಕೊಂಡಿದೆ.

ಈ ಜಾಲಕ್ಕೆ ಈಗಾಗಲೇ ನೂರಾರು ಜನ ಹಣ-ಆಸ್ತಿ ಕಳೆದುಕೊಂಡಿದ್ದಾರೆ. ಇಂತಹ ವಂಚಕರ ಜಾಲ ವಿಜಯಪುರ ಜಿಲ್ಲೆ ಹಾಗೂ ನಗರದಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಸಾಕಷ್ಟು ಬಡ ಜನರು ಈಗಾಗಲೇ ಮೋಸ ಹೋಗಿದ್ದಾರೆ. ಕಷ್ಟಪಟ್ಟು ದುಡಿದು, ಸಾಲ-ಸೋಲ ಮಾಡಿ ನಿವೇಶನ, ಜಮೀನು ಖರೀದಿ ಮಾಡುವ ಬಡವರು, ಈ ರೀತಿಯ ವಂಚನೆಗೆ ಒಳಗಾಗಿ ತಮ್ಮ ಆಸ್ತಿ ಕಳೆದುಕೊಂಡು ಕಷ್ಟ ಅನುಭವಿಸುತ್ತಿದ್ದಾರೆ.

ಈ ಜಾಲಕ್ಕೆ ಸಿಲುಕಿ ವಂಚನೆಗೊಳಗಾದವರು ಹಾಗೂ ಜಮೀನು ಕಳೆದುಕೊಂಡವರು ಪೊಲೀಸ್ ಠಾಣೆಗೆ ದೂರು ನೀಡಿದರೂ ಯಾವ ಪ್ರಯೋಜನವೂ ಆಗುತ್ತಿಲ್ಲ. ಇದಕ್ಕೆ ಸಂಬಂಧಿಸಿದಂತೆ ತನಿಖೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹೀಗಾಗಿ ನೊಂದ ಬಡವರಿಗೆ ನ್ಯಾಯ ದೊರಕುತ್ತಿಲ್ಲ. ಬಡಜನರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಇಂತಹ ಪ್ರಕರಣಗಳನ್ನು ತ್ವರಿತಗತಿಯಲ್ಲಿ ತನಿಖೆ ಮಾಡಲು ವಿಶೇಷ ತನಿಖಾ ತಂಡ ರಚನೆ ಮಾಡಬೇಕು ಎಂದು ಒತ್ತಾಯಿಸಿದರು.

ಕೂಡಲೇ ಈ ರೀತಿಯ ಪ್ರಕರಣಗಳನ್ನು ಬೇಧಿಸಿ ಮೂಲ ಮಾಲೀಕರಿಗೆ ಅವರ ಜಮೀನು-ನಿವೇಶನ ಪುನ: ಹಂಚಿಕೆಯಾಗುವ ನಿಟ್ಟಿನಲ್ಲಿ ವಿಶೇಷ ಕಾರ್ಯಾಚರಣೆ ಮಾಡಬೇಕು. ಜಿಲ್ಲೆಯಲ್ಲಿ ಈ ರೀತಿಯ ಭೂ ಮಾಫಿಯಾವನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಪಟ್ಟಣಶೆಟ್ಟಿ ಆಗ್ರಹಿಸಿದರು.

# ವರ್ಷದಿಂದ ಸ್ಥಗಿತಗೊಂಡ ರಸ್ತೆ ಕಾಮಗಾರಿ ಪರದಾಡುತ್ತಿರುವ ರೈತರು, ವಿದ್ಯಾರ್ಥಿಗಳು



**ಚಿಮ್ಮಡ :** ಗ್ರಾಮದ ಘಟಪ್ರಭಾ ಎಡದಂಡೆ ಕಾಲುವೆಯ ಜಮಖಂಡಿ ಉಪಕಾಲುವೆಯಿಂದ ಚಿಮ್ಮಡ-ಜಗದಾಳ ಹೊರವಲಯ ರಸ್ತೆಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯ ಕಾಮಗಾರಿಯನ್ನು ಕೂಡಲೆ ಪ್ರಾರಂಭಿಸಬೇಕೆಂದು ಈ ಭಾಗದ ನಾಗರಿಕರು ಒತ್ತಾಯಿಸಿದ್ದಾರೆ.

ತಗ್ಗು ದಿನ್ನೆಗಳಿಂದ ಕೂಡಿದ ಈ ರಸ್ತೆಯನ್ನು ದುರಸ್ತಿಗೊಳಿಸುವಂತೆ ಅಧಿಕಾರಿಗಳಿಗೆ ಜನಪ್ರತಿನಿಧಿಗಳಿಗೆ ಮನವಿ ಮಾಡಿದ ಹಿನ್ನೆಲೆ ಕಳೆದ ವರ್ಷವೇ ಗುಂಪು ಕಾಮಗಾರಿಯೊಂದಿಗೆ ಸೇರಿಸಿ ಟೆಂಡರ್ ಮಾಡಲಾಗಿತ್ತು. ಗುತ್ತಿಗೆದಾರರು ಕೂಡ 900 ಮೀ. ಉದ್ದದ ಈ ರಸ್ತೆಗೆ ದಪ್ಪ ಜಲ್ಲಿ ಸುರಿಯುವ ಮೂಲಕ ಕಾಮಗಾರಿಯನ್ನು ಪ್ರಾರಂಭಿಸಿದ್ದರು, ಆದರೆ ಕಳೆದ ಒಂದು ವರ್ಷದಿಂದ ಯಾವುದೇ ಚಟುವಟಿಕೆ ಇಲ್ಲದೇ ಕಾಮಗಾರಿ ಸ್ಥಗಿತಗೊಂಡಿದ್ದರಿಂದ ಈ ಜಲ್ಲಿ ರಸ್ತೆಯಲ್ಲಿ ಸಾರ್ವಜನಿಕರು ಸಂಚರಿಸುವುದು ದುಸ್ತರವಾಗಿದೆ. ಈ ಭಾಗದ ರೈತರು ತಮ್ಮ ಹೊಲ ಗದ್ದೆಗಳಿಗೆ ತೆರಳಲು ಏಕೈಕ ಮಾರ್ಗ ಇದಾಗಿದ್ದರಿಂದ ಕೃಷಿಕರ ಗೋಳು ಹೇಳತೀರದು, ಅಲ್ಲದೇ ಸೀಮಿ ಲಕ್ಕವ್ವದೇವಿ ದೇವಸ್ಥಾನಕ್ಕೆ, ಹಾಗೂ ಪ್ರಾಥಮಿಕ ಶಾಲೆಗೆ ಬರಲು ಈ ಮಾರ್ಗವನ್ನೇ ಅವಲಂಭಿಸಿರುವುದರಿಂದ ಈ ಜಲ್ಲಿ ತುಂಬಿದ ಈ ರಸ್ತೆಯಲ್ಲಿ ಹಲವಾರು ವಿದ್ಯಾರ್ಥಿಗಳು ಬಿದ್ದು ಗಾಯ ಮಾಡಿಕೊಂಡಿದ್ದಾರೆ, ಸಂಬಂದಿಸಿದ ಅಧಿಕಾರಿಗಳು ಕೂಡಲೆ ಈ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಈ ಭಾಗದ ರೈತರು ಆಗ್ರಹಿಸಿದ್ದಾರೆ.

> **"ಈ ಕಾಮಗಾರಿಯ ಟೆಂಡರ್ ಪಡೆದ ಗುತ್ತಿಗೆದಾರ ಇಲಾಖೆಯ ಸಂಪರ್ಕಕ್ಕೆ ಸಿಗುತ್ತಿಲ್ಲ, ಈಗಾಗಲೇ ಅವರಿಗೆ ಕಾಮಗಾರಿ ಪ್ರಾರಂಭಿಸುವಂತೆ ಲಿಖಿತ ನೋಟೀಸ್ ನೀಡಲಾಗಿದ್ದು ಸರಕಾರದ ಮಾರ್ಗಸೂಚಿ ಅನ್ವಯ ಈ ಗುತ್ತಿಗೆಯನ್ನು ರದ್ದು ಗೊಳಿಸಿ ಮರುಟೆಂಡರ್ ನೊಂದಿಗೆ ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು.**
>
> **। ಚೇತನ್ ಅಬ್ಬಿಗೇರ**
> **ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು. ಜಿಎಲ್ಬಿಸಿ ರಬಕವಿ.**



**ಇತ್ತೀಚೆಗೆ ಉದ್ಘಾಟನೆಗೊಂಡ ಪೂರ್ಣಿಮಾ ಹೀರೋ ಹೊಂಡಾ ಶೋರೂಂ ಮಾಲಿಕರಾದ ಗುರು ಹೊರಟ್ಟಿ ಅವರನ್ನು ರಬಕವಿಯ ಡಿ.ಕೆ. ಕೊಟ್ರಶೆಟ್ಟಿ ಫೌಂಡೇಶನ್ ಅಧ್ಯಕ್ಷ ಮತ್ತು ಭಾರತ ಗ್ಯಾಸ್ ವಿತರಕರಾದ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ಅವರು ಸನ್ಮಾನಿಸಿದರು. ಅವರೊಂದಿಗೆ ಬಸವರಾಜ ದಲಾಲ, ರೇವಣ್ಣ ಉಮದಿ ಉಪಸ್ಥಿತರಿದ್ದರು.**

# ಸೈಕ್ಲಿಂಗನಲ್ಲಿ ಕಂಚಿನ ಪದಕ ಗೆದ್ದ ಪಾಯಲ್ ಚವ್ಹಾಣ



**ವಿಜಯಪುರ :** ಜಿಲ್ಲೆಯ ಸೈಕ್ಲಿಂಗ್ ಕ್ರೀಡಾಪಟು ಪಾಯಲ್ ಚವ್ಹಾಣ ಅವರು ನವದೆಹಲಿಯಲ್ಲಿ ಮೇ 26 ರಿಂದ 27 ಎರಡು ದಿನಗಳ ಕಾಲ ಜರುಗಿದ 'ಖೇಲೋ ಇಂಡಿಯಾ' ಮಹಿಳೆಯರ ಸೈಕ್ಲಿಂಗ್ ಚಾಂಪಿಯನ್ ಶಿಪ್ ನಲ್ಲಿ ವಿಜಯಪುರದ ಭೂತನಾಳ ತಾಂಡಾದ ಪಾಯಲ್ ಚವ್ಹಾಣ ಕಂಚಿನ ಪದಕವನ್ನು ಗೆಲ್ಲುವ ಮೂಲಕ ಜಿಲ್ಲೆಯ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ.

ಪಾಯಲ್ ಚವ್ಹಾಣ ಸಾಧನೆಗೆ ಸೈಕ್ಲಿಂಗ್ ತರಬೇತುದಾರರಾದ ಅಲ್ಕಾ ಘಡತರೆ ಹಾಗೂ ರಮೇಶ ರಾಠೋಡ ಅಭಿನಂದಿಸಿದ್ದಾರೆ.

ಮುಂಬರುವ ದಿನಗಳಲ್ಲಿ ಪಾಯಲ್ ಚವ್ಹಾಣ ಇನ್ನಷ್ಟು ಹೆಚ್ಚಿನ ಸಾಧನೆ ಮಾಡಲಿ ಎಂದು ಕ್ರೀಡಾಭಿಮಾನಿಗಳು ಶುಭ ಹಾರೈಸಿದ್ದಾರೆ.

# ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಕೊಪ್ಪಳ :** ಸಮಾಜ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ವಿವಿಧ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆಯ ಮೂಲಕ ಪರಿಶಿಷ್ಟ ಪಂಗಡದ ವಿದಾರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿ ಸಲ್ಲಿಕೆ ಅವಧಿಯನ್ನು ಜೂನ್ 01 ರವರೆಗೆ ವಿಸ್ತರಿಸಲಾಗಿದೆ.

ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಾದ ಕುಕನೂರಿನ ವಿದ್ಯಾಶ್ರೀ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕೊಪ್ಪಳ ನಗರದ ಹೊಸಪೇಟೆ ರಸ್ತೆಯ ಎಸ್.ಎಫ್.ಎಸ್ ಪ್ರೌಢಶಾಲೆ ಹಾಗೂ ಲಯನ್ಸ್ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ, ಗಂಗಾವತಿಯ ಬೇಥಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಭಾಗ್ಯನಗರದ ಜ್ಞಾನಬಂಧು ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಕುಷ್ಟಗಿಯ ವಿಜಯ ಚಂದ್ರಶೇಖರ ಪ್ರಾಥಮಿಕ ಹಾಗೂ ಪ್ರೌಢಶಾಲೆ,

ಕೊಪ್ಪಳದ ನವಚೇತನ ಆಂಗ್ಲ ಮಾಧ್ಯಮ ಪ್ರಾಥಮಿಕ, ಪ್ರೌಢಶಾಲೆ ಹಾಗೂ ವಿಜ್ಞಾನ ಪದವಿ ಪೂರ್ವ ಕಾಲೇಜುಗಳಲ್ಲಿ 6ನೇ ತರಗತಿಗೆ ಪ್ರವೇಶಕ್ಕೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯು ಅವಕಾಶ ಕಲ್ಪಿಸಿದೆ. ಪರಿಶಿಷ್ಟ ಪಂಗಡದ ಅರ್ಜಿಗಳು ಕಡಿಮೆ ಪ್ರಮಾಣದಲ್ಲಿ ಸ್ವೀಕೃತಿಯಾಗಿರುವುದರಿಂದ ಅರ್ಜಿ ಸ್ವೀಕಾರ ದಿನಾಂಕವನ್ನು ಜೂನ್ 01 ರವರೆಗೆ ವಿಸ್ತರಿಸಲಾಗಿದೆ. ಆಸಕ್ತ ಹಾಗೂ ಅರ್ಹ ವಿದ್ಯಾರ್ಥಿಗಳು ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ಹಾಗೂ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳವರನ್ನು ಸಂಪರ್ಕಿಸಬಹುದಾಗಿದೆ ಎಂದು ಕೊಪ್ಪಳ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬನಹಟ್ಟಿ ಕೆರೆ: ಅನಾಹುತ ತಡೆಯಲು ತಡೆಗೋಡೆ ಅಗತ್ಯ

## ಮಕ್ಕಳು, ಜನರು ಕೆರೆಗೆ ಇಳಿಯದಂತೆ ಕ್ರಮ ಅಗತ್ಯ

● ಕಿರಣ ಶ್ರೀಶೈಲ ಆಳಗಿ



**ರಬಕವಿ-ಬನಹಟ್ಟಿ :** 1972 ರಲ್ಲಿ ನಿರ್ಮಾಣವಾದ ಬನಹಟ್ಟಿಯ ವಿಶಾಲವಾದ ಕೆರೆಗೆ ಸೂಕ್ತ ಭದ್ರತೆ ಇಲ್ಲದಂತಾಗಿದೆ. ಆ ದಿಶೆಯಲ್ಲಿ ಅಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದು ಅವಶ್ಯವಾಗಿದೆ.

ಬನಹಟ್ಟಿ ಹಾಗೂ ಸುತ್ತ ಮುತ್ತಲಿನ ಗ್ರಾಮೀಣ ಪ್ರದೇಶದ ರೈತರ ತೋಟದ ಬಾವಿಗಳಿಗೆ ಬಸಿಯುವ ನೀರಿನಿಂದ ಅಂತಜ9ಲ ಮಟ್ಟವನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಮತ್ತು ಕೆರೆಯಲ್ಲಿ ಹೆಚ್ಚಾದ ನೀರು ಹಳ್ಳದ ಮೂಲಕ ಹರಿದು ಬನಹಟ್ಟಿ ನಗರದ ನಿವಾಸಿಗಳಿಗೆ ಅನುಕೂಲವಾಗುವ ದಿಶೆಯಲ್ಲಿ 1972 ರಲ್ಲಿ ಅಂದಿನ ಜಮಖಂಡಿಯ ಅತ್ಯಂತ ಪ್ರಾಮಾಣಿಕ ಶಾಸಕರಾಗಿದ್ದ ಪವಾಡೆಪ್ಪ ಎಂ. ಬಾಂಗಿಯವರು ಬನಹಟ್ಟಿಯ ಕೆರೆಯನ್ನು ನಿರ್ಮಾಣ ಮಾಡಿದ್ದರು. ಅಂದು ಈ ಪ್ರದೇಶದಲ್ಲಿ ಭೀಕರ ಬರಗಾಲವಿತ್ತು. ಬರಗಾಲವನ್ನು ನೀಗಿಸುವ ನಿಟ್ಟಿನಲ್ಲಿ ಕೆರೆಯನ್ನು ನಿರ್ಮಾಣ ಮಾಡಲಾಗಿತ್ತು.

ಆದರೆ ಸದ್ಯ ಇದು ಮಕ್ಕಳನ್ನು ಬಲಿ ತೆಗೆದುಕೊಳ್ಳುವ ಕೆರೆಯಾಗಿರುವುದು ಎಲ್ಲರಲ್ಲಿ ಆತಂಕ ಮೂಡಿಸಿದೆ. ಆ ನಿಟ್ಟಿನಲ್ಲಿ ಭದ್ರತೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದು ಅವಶ್ಯವಾಗಿದೆ.

> **"ಬೇಸಿಗೆ ರಜೆಯ ಸಂದರ್ಭದಲ್ಲಿ ಮಕ್ಕಳು ಕೆರೆ, ನದಿ ತೀರ ಮತ್ತು ಬಾವಿಗಳಿಗೆ ತೆರಳದಂತೆ ಪಾಲಕರು ಕೂಡಾ ಗಮನ ನೀಡಬೇಕಾಗಿದೆ. ಜನರು ಮತ್ತು ಮಕ್ಕಳು ಕೆರೆಗೆ ಇಳಿಯದಂತೆ ಮತ್ತು ಈಜಾಡದಂತೆ ಸಂಬಂಧಪಟ್ಟ ಇಲಾಖೆಯವರು ಕ್ರಮ ತೆಗೆದುಕೊಳ್ಳಬೇಕಾಗಿದೆ**
>
> **◆ ಭೀಮಶಿ ಮಗದುಮ್,**
> **ರೈತರು, ಬನಹಟ್ಟಿ.**

16 ಎಪ್ರಿಲ್ 2016 ರಲ್ಲಿ ಬನಹಟ್ಟಿಯ ಒಂದೇ ಮನೆಯ ಮೂವರು ಬಾಲಕರು ಕೆರೆಯಲ್ಲಿ ಮುಳುಗಿ ಮೃತ ಪಟ್ಟಿದ್ದವು. ಕಳೆದ ವಾರ ಸಮೀಪದ ಹೊಸೂರಿನ ಇಬ್ಬರು ಬಾಲಕರು ಮತ್ತೆ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದವು. ಮೊದಲಿನಿಂದಲೂ ಇಂಥ ಪ್ರಕರಣಗಳು ನಡೆಯುತ್ತ ಬಂದಿವೆ.

ಕೆರೆಯ ಸುತ್ತಲೂ ಎತ್ತರವಾದ ಮಣ್ಣಿನ ದಿಣ್ಣೆಯನ್ನು ನಿರ್ಮಾಣ ಮಾಡಲಾಗಿದೆ. ಆದರೆ ಕೆರೆಯಲ್ಲಿ ಹೆಚ್ಚಾದ ನೀರು ಹಳ್ಳದ ಮೂಲಕ ಹರಿದು ಬನಹಟ್ಟಿ ಕಡೆಗೆ ಹೋಗುವಂತೆ ಮಾಡಿದ್ದಾರೆ. ಇಲ್ಲಿ ಯಾವುದೇ ತಡೆಗೋಡೆ ಇಲ್ಲ.

ಕೆರೆಯು ತುಂಬಿದಾಗ ಸುತ್ತಲಿನ ಜನರು ಮನೆಯ ಹಾಸಿಗೆಗಳನ್ನು, ಬಟ್ಟೆಗಳನ್ನು ಹಾಗೂ ವಾಹನಗಳನ್ನು ಕೆರೆಯ ತೀರದಲ್ಲಿ ನಿಲ್ಲಿಸಿ ಶುಚಿಗೊಳಿಸುತ್ತಾರೆ. ಇನ್ನು ಟ್ಯಾಂಕರ್ ಗಳು ನೀರು ತುಂಬಿಕೊಳ್ಳುವುದರ ಸಲುವಾಗಿ ಇಲ್ಲಿ ಒಂದಿಷ್ಟು ಸ್ಥಳವನ್ನು ಬಿಡಲಾಗಿದೆ. ಈ ಸ್ಥಳದ ಮೂಲಕವೇ ಜನರು ಮತ್ತು ಮಕ್ಕಳು ಕೆರೆಗೆ ಇಳಿಯುತ್ತಾರೆ.

ಜನರು ಮತ್ತು ಮಕ್ಕಳು ಕೆರೆಗೆ ಇಳಿಯದಂತೆ ಮುನ್ನೆಚ್ಚರಿಕೆಯ ಕ್ರಮವಾಗಿ ಇಲ್ಲಿ ಯಾವುದೇ ಎಚ್ಚರಿಕೆ ಫಲಕಗಳು ಇಲ್ಲದಂತಾಗಿವೆ. ನೀರಾವರಿ ಇಲಾಖೆಯ ಅಧಿಕಾರಿಗಳು ಕೆರೆಯ ನಿರ್ವಹಣೆಯ ಕಾರ್ಯವನ್ನು ಮಾಡುತ್ತಿದ್ದು, ಅಧಿಕಾರಿಗಳು ಕೆರೆಯಲ್ಲಿ ಜನರು ಮತ್ತು ಮಕ್ಕಳು ಇಳಿಯದಂತೆ ಸೂಕ್ತ ಕ್ರಮ ತೆಗೆದು ಕೊಳ್ಳಬೇಕಾಗಿದೆ.

> **"ಕೆರೆಯ ಫಿನ್ಸಿಂಗ್ ಕಾರ್ಯ ನಡೆದಿತ್ತು. ಆದರೆ ಸುತ್ತಲಿನ ರೈತರು ಈ ಕುರಿತು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುವುದರಿಂದ ಫಿನ್ಸಿಂಗ್ ಕಾರ್ಯ ಸ್ಥಗಿತಗೊಂಡಿದೆ. ಮುಂದೆ ಯಾವುದೇ ಅನಾಹುತಗಳು ನಡೆಯದಂತೆ ಕೆರೆಯ ಸುತ್ತ ಮುತ್ತ ಸೂಕ್ತ ಫಲಕಗಳನ್ನು ಅಳವಡಿಸಲು ಮತ್ತು ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.**
>
> **◆ ಚೇತನ ಅಂಬಿಗೇರ**
> **ಸಹಾಯಕ ಕಾರ್ಯನಿರ್ವಾಹಕ ಎಂಜಿನೀಯರ್ ಜಿ.ಎಲ್. ಬಿ. ಸಿ. ರಬಕವಿ.**

# ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ: ಆರೋಪಿಗೆ ಶಿಕ್ಷೆ ಪ್ರಕಟ

**ಕೊಪ್ಪಳ :** ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ತಾವರಗೇರಾ ಪಟ್ಟಣದ ವಿರೇಶ ಬಿಸ್ತಿ ಎಂಬ ವ್ಯಕ್ತಿಯ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ (ಪೋಕ್ಸೋ) ನ್ಯಾಯಾಧೀಶರಾದ ಕುಮಾರ ಡಿ.ಕೆ ಅವರು ಮೇ 20 ರಂದು ಆರೋಪಿಗೆ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ.

ದಿ: 19-06-2019 ರಂದು ಹಾಗೂ ಪೂರ್ವದಲ್ಲಿ ಪಿರ್ಯಾಧಿದಾರರ ಅಪ್ರಾಪ್ತ ವಯಸ್ಸಿನ ಬಾಲಕಿಗೆ ತಾವರಗೇರಾ ಪಟ್ಟಣ ನಿವಾಸಿ ವಿರೇಶ ಬಿಸ್ತಿ ಎಂಬ ವ್ಯಕ್ತಿ ಆಗಾಗ್ಗೆ ತನ್ನ ಎರಡು ಮೊಬೈಲ್ ಫೋನ್‌ಗಳಿಂದ ಬಾಧಿತಳ ಮನೆಯಲ್ಲಿನ ಫೋನ್‌ಗೆ ಕರೆ ಮಾಡಿ ಅಶ್ಲೀಲವಾಗಿ ಮಾತನಾಡಿ, ಲೈಂಗಿಕ ಚಟುವಟಿಕೆಗಳಿಗೆ ಪ್ರಚೋದನೆ ನೀಡಿದ್ದು ಅಲ್ಲದೇ ಬಾಧಿತಳು ಹೊರಗಡೆ ಹೋದಾಗ ಸಾರ್ವಜನಿಕ ರಸ್ತೆಯ ಮೇಲೆ ಅಶ್ಲೀಲವಾಗಿ ಸನ್ನೆ ಮಾಡಿ ಲೈಂಗಿಕ ಕಿರುಕುಳ ನೀಡಿರುವ ಆರೋಪದ ಹಿನ್ನೆಲೆಯಲ್ಲಿ ತಾವರಗೇರಾ ಪೋಲಿಸರು ದೂರು ಸ್ವೀಕರಿಸಿದ್ದರು. ತಾವರಗೇರಾ ಪಿಎಸ್ಐ ಮಹಾಂತೇಶ ಸಜ್ಜನ ಅವರು ಪ್ರಕರಣದ ತನಿಖೆಯನ್ನು ನಿರ್ವಹಿಸಿ ಆರೋಪಿತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಕರಣವು ಸ್ಪೇ.ಎಸ್‌ಸಿ[ಪೋಕ್ಸೋ] ಸಂ: 36/2019 ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ನ್ಯಾಯಾಲಯ ಆರೋಪಿ ವಿರೇಶ ಬಿಸ್ತಿ ಸಾ: ತಾವರಗೇರಾ ಇತನ ಮೇಲಿನ ಆರೋಪಣೆಗಳು ಸಾಬೀತಾಗಿವೆ ಎಂದು 02 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ. 15,000 ಗಳ ದಂಡವನ್ನು ಭರಿಸುವಂತೆ ಆದೇಶಿಸಿತೀರ್ಪು ಪ್ರಕಟಿಸಿದೆ.ಪ್ರಕರಣದಲ್ಲಿಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಗೌರಮ್ಮ ದೇಸಾಯಿ ಅವರು ವಾದ ಮಂಡಿಸಿದ್ದರು ಎಂದು ನ್ಯಾಯಾಲಯದ ಪ್ರಕಟಣೆ ತಿಳಿಸಿದೆ.

# ಗಾಂಧಿ ಕುರಿತ ಹೇಳಿಕೆ: ಪ್ರಧಾನಿ ವಿರುದ್ಧ ಖರ್ಗೆ ವಾಗ್ದಾಳಿ

**ನವದೆಹಲಿ :** 'ಗಾಂಧಿ' ಸಿನಿಮಾ ನಿರ್ಮಾಣವಾಗುವವರೆಗೂ ಮಹಾತ್ಮಾ ಗಾಂಧಿ ಬಗ್ಗೆ ಜಗತ್ತಿಗೆ ಗೊತ್ತಿರಲಿಲ್ಲ' ಎನ್ನುವ ಪ್ರಧಾನಿ ನರೇಂದ್ರ ಮೋದಿ ಹೇಳಿಕೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರು ತಿರುಗೇಟು ನೀಡಿದ್ದಾರೆ.ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಈಗ ಸುಳ್ಳು ಹೇಳುವುದಲ್ಲಿ ಪ್ರಧಾನಿ ನಸ್ಸೀಮರು ಗಾಂಧೀಜಿ, ವಿಶ್ವ ದೃಷ್ಟಿಕೋನವನ್ನು ಪಡೆದವರು. ಇಂತವರಿಂದ ಗಾಂಧೀಜಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಗೋಡ್ಸೆಯನ್ನು ಮಾತ್ರ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಗೋಡ್ಸೆ ಮಾರ್ಗ ಅನುಸರಿಸುತ್ತಾರೆ ಎಂದಿದ್ದಾರೆ.ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಪ್ರತಿಕ್ರಿಯಿಸಿ ನಾಥೂರಾಂ ಗೋಡ್ಸೆಯ ಹಿಂಸಾಚಾರದ ಮಾರ್ಗವನ್ನು ಅನುಸರಿಸುವವರು ಗಾಂಧಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಪಕ್ಷದ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಹೇಳಿದ್ದಾರೆ. ಅವರದೇ ಸರ್ಕಾರ ವಾರಾಣಸಿ, ದೆಹಲಿ ಮತ್ತು ಅಹಮದಾಬಾದ್‌ನಲ್ಲಿ ಗಾಂಧಿಜಿ ಅವರಿಗೆ ಸೇರಿದ ಸಂಸ್ಥೆಗಳನ್ನು ನಾಶಪಡಿಸಿದೆ.ಮಹಾತ್ಮ ಗಾಂಧಿ ಹತ್ಯೆಯಲ್ಲಿ ನಾಥೂರಾಂ ಗೋಡ್ಸೆಯೊಂದಿಗೆ ಸೈದ್ಧಾಂತಿಕ ಪೂರ್ವಜರು ಭಾಗಿಯಾಗಿದ್ದಾರೆ. ಬಾಪು ಅವರು ನೀಡಿದ ಸತ್ಯದ ಮಾರ್ಗ ಅನುಸರಿಸಲು ಸಾಧ್ಯವಿಲ್ಲ ಎಂದಿದ್ದಾರೆ.

'ಇಡೀ ಜಗತ್ತಿಗೆ ಗಾಂಧೀಜಿ ಸ್ಪೂರ್ತಿಯಾಗಿದ್ದರು. ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ನೆಲ್ಸನ್ ಮಂಡೇಲಾ ಮತ್ತು ಆಲ್ಬರ್ಟ್ ಐನ್ಸ್ಟೀನ್ ಎಲ್ಲರೂ ಗಾಂಧಿಯವರಿಂದ ಸ್ಪೂರ್ತಿ ಪಡೆದವರು. ಭಾರತದಲ್ಲಿ ಕೋಟಿಗಟ್ಟಲೆ ಜನರು ಗಾಂಧಿಯವರ ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನು ಅನುಸರಿಸುತ್ತಿದ್ದಾರೆ. ಇದು ಸತ್ಯ ಮತ್ತು ಅಸತ್ಯದ ನಡುವೆ, ಹಿಂಸೆ ಮತ್ತು ಅಹಿಂಸೆಯ ನಡುವಿನ ಹೋರಾಟ ಎಂದಿದ್ದಾರೆ.ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಅವರು ಗಾಂಧೀಜಿ ಹತ್ಯೆ ಮಾಡಿದ ಸಂಘಟನೆಯ ಮೂಲಹೊಂದಿರುವವರಿಂದ ಇದಕ್ಕಿಂತ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ ಎಂದು ಹರಿಹಾಯ್ದಿದ್ದಾರೆ.'ಭಾರತದ ಶ್ರೇಷ್ಠ ಚಿಂತಕ ನಾಯಕನನ್ನು ಜನಪ್ರಿಯಗೊಳಿಸಲು ಚಲನಚಿತ್ರದ ಅಗತ್ಯವಿದೆ ಎಂದು ಪ್ರಧಾನಿ ಆದವರು ಭಾವಿಸುವುದು ಅಜ್ಞಾನ ಮಾತ್ರವಲ್ಲದೆ ಬಾಪೂಗೆ ಅವಮಾನವೂ ಆಗಿದೆ' ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಮಾತನಾಡಿ, '1982ರ ಮೊದಲು ಮಹಾತ್ಮ ಗಾಂಧಿಯನ್ನು ವಿಶ್ವದಾದ್ಯಂತ ಗುರುತಿಸದಿರುವ ನಿರ್ಗಮಿತ ಪ್ರಧಾನಿ ಯಾವ ಜಗತ್ತಿನಲ್ಲಿ ವಾಸಿಸುತ್ತಿದ್ದಾರೆಂದು ನನಗೆ ತಿಳಿದಿಲ್ಲ. ಯಾರಾದರೂ ಮಹಾತ್ಮರ ಪರಂಪರೆ ನಾಶಪಡಿಸಿದ್ದರೆ, ಅದು ನಿರ್ಗಮಿಸುವ ಪ್ರಧಾನಿ ನರೇಂದ್ರ ಮೋದಿಯೇ ಆಗಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

# ಪ್ರೀತಿಸಿದ ತಪ್ಪಿಗೆ ಪ್ರಿಯಕರನ ಮೇಲೆ ಹಲ್ಲೆ



**ವಿಜಯಪುರ :** ಪ್ರೀತಿಸಿದ ತಪ್ಪಿಗೆ ಪ್ರಿಯಕರನ ಮೇಲೆ ಹಲ್ಲೆ ನಡೆದಿರುವ ಘಟನೆ

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣದಲ್ಲಿ ಜರುಗಿದೆ. ಯುವಕ ರಾಹುಲ ಬಿರಾದಾರನ ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಹತ್ಯೆಗೆ ಯತ್ನ ಮಾಡಲಾಗಿದೆ. ಸದ್ಯ ಸಾವು ಬದುಕಿನ ಮಧ್ಯೆ ಪ್ರಿಯಕರ ರಾಹುಲ್ ಬಿರಾದಾರ ಹೋರಾಟ ನಡೆಸುತ್ತಿದ್ದಾನೆ.

ರಾಹುಲ್ ಮೈ ತುಂಬ ಸುಟ್ಟ ಗಾಯಗಳಾಗಿದ್ದು , ವಿಜಯಪುರ ನಗರದ ಖಾಸಗಿ ಆಸ್ಪತ್ರೆಗೆ ಯುವಕ ರಾಹುಲ್ ದಾಖಲಾಗಿದ್ದಾನೆ.

ಯುವತಿಯ ತಂದೆ, ಚಿಕ್ಕಪ್ಪ, ಚಿಕ್ಕಮ್ಮ ಹಾಗೂ ಮನೆಗೆಲಸ ಮಾಡುತ್ತಿದ್ದವನಿಂದ ಈ ಕೃತ್ಯ ನಡೆದಿದೆ ಅಂತಾ ರಾಹುಲ್ ತಂದೆ ರಾಮನಗೌಡ ಆರೋಪಿಸಿದ್ದಾರೆ. ಕಳೆದ ಒಂದು ವರ್ಷದಿಂದ ಇಬ್ಬರ ಲವ್ ಬ್ರೇಕ್ ಅಪ್ ಆಗಿತ್ತು. ಇದರಿಂದ ರಾಹುಲ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದನಂತೆ.

ಇತ್ತೀಚೆಗೆ ಯುವತಿ ಮನೆ ಬಳಿ ಈತ ಓಡಾಡುತ್ತಿದ್ದನಂತೆ. ಮನೆ ಹತ್ತಿರ ಯಾಕೆ ಓಡಾಡುತ್ತಿದ್ದೀಯಾ ಎಂದು ಯುವತಿ ಮನೆಯವರು ರಾಹುಲಗೆ ಪ್ರಶ್ನಿಸಿದ್ದರಂತೆ.

ಮಾತಿಗೆ ಮಾತು ಬೆಳೆದು ನಿಮ್ಮ ಮನೆಗೆ ಬರುವೆ ಎಂದು ಯುವತಿ ಮನೆಗೆ ರಾಹುಲ್ ಹೋಗಿದ್ದನಂತೆ.

ಆಗ ಪ್ರೇಯಸಿಯ ಮನೆಯವರೊಂದಿಗೆ ಮಾತನಾಡುತ್ತಿದ್ದಾಗ ಯುವತಿ ತಂದೆ ಅಪ್ಪು ಮದರಿ ರಾಹುಲ್ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ

ಎಂದು ಆರೋಪಿಸಲಾಗಿದೆ. ಮುದ್ದೇಬಿಹಾಳ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ಸಂಭವಿಸಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State